ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 10 ಸಂ. 11 ನವೆಂಬರ್ 2013 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಚಂಪಾ**
**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)**

ನನ್ನ ಹಳ್ಳಿಯ ಹತ್ತಿರ ಒಂದು ಸಣ್ಣ ಗುಡ್ಡವಿದೆ, ಅದರ ಮೇಲೊಂದು ಒಂಟಿ ಮರವಿದೆ. ನಾನು ಚಿಕ್ಕವನಾಗಿದ್ದಾಗ ನನ್ನ ಸ್ನೇಹಿತರೊಡನೆ ಸೂರ್ಯಾಸ್ತವನ್ನು ವೀಕ್ಷಿಸಲು ಅಲ್ಲಿಗೆ ಹೋಗುತ್ತಿದ್ದೆ. ಸೂರ್ಯಾಸ್ತದ ಆ ದೃಶ್ಯವನ್ನು ಕುಂಚದಲ್ಲಿಳಿಸಲು ಹಲವಾರು ಬಾರಿ ಪ್ರಯತ್ನಿಸಿ, ಕ್ಷಣಕ್ಷಣಕ್ಕೂ ಬದಲಾಗುವ ಆ ವರ್ಣವೈಭವವನ್ನು ಸೆರೆಹಿಡಿಯಲಾಗದೆ ನಿರಾಶನಾಗಿದ್ದೇನೆ. ಆದರೆ ಆ ಹಳದಿ-ಕೆಂಪು ಬಣ್ಣದ ಗೋಳವು ವರ್ಣಗಳನ್ನು ಚೆಲ್ಲಾಡಿಕೊಂಡು ದಿಗಂತದಲ್ಲಿ ಜಾರುತ್ತ ಪ್ರಕೃತಿಯಲ್ಲೊಂದು ತಣ್ಣನೆಯ ಶಾಂತತೆಯನ್ನು ತರುವುದನ್ನು ಒಬ್ಬನೇ ಮೌನವಾಗಿ ಕುಳಿತು ವೀಕ್ಷಿಸುವುದು ನನಗೆ ಸದಾ ಆನಂದ ತಂದಿದೆ. ಆಗ ನನಗಾಗುತ್ತಿದ್ದ ಏನೋ ಒಂದು ಉನ್ನತ ಹಾಗೂ ಅತೀಂದ್ರಿಯ ಅನುಭವವನ್ನು ನನಗೆ ಅರ್ಥ ಮಾಡಿಕೊಳ್ಳಲಾಗುತ್ತಿರಲಿಲ್ಲ, ಅಲ್ಲದೆ ಅದನ್ನು ಲವಲೇಶದಷ್ಟು ವರ್ಣಿಸಲೂ ನನಗೆ ಪದಗಳು ಸಿಕ್ಕಿಲ್ಲ. ಇದು ಸುಮಾರು ಐವತ್ತು ವರ್ಷಗಳ ಹಿಂದೆ ನಡೆದುದು.

ಇತ್ತೀಚೆಗೆ ನಾನು ಅದೇ ಸ್ಥಳಕ್ಕೆ ಹೋಗಿದ್ದೆ, ಕಾಲದ ವೈಪರೀತ್ಯಗಳು ಅದಕ್ಕೆ ತಾಕಿದಂತಿರಲಿಲ್ಲ. ಆಗ ಸಂಜೆಯಾಗಿತ್ತು; ಜೀವನೋಪಾಯಕ್ಕಾಗಿ ದೇಶದ ವಿವಿಧ ಭಾಗಗಳಲ್ಲಿ ಹಂಚಿಹೋಗಿದ್ದ ಅದೇ ಸ್ನೇಹಿತರು ಹಳೆಯ ನೆನಪುಗಳನ್ನು ಮೆಲುಕು ಹಾಕಲೆಂದು ಒಟ್ಟಿಗೆ ಸೇರಿದ್ದೆವು. ಅಲ್ಲಿ ನಾವು ಮತ್ತೆ ಸೂರ್ಯಾಸ್ತವನ್ನು ಅನುಭವಿಸಬಯಸಿದ್ದೆವು. ಐವತ್ತು ವರ್ಷಗಳ ಹಿಂದಕ್ಕೆ, ನನ್ನ ಬಾಲ್ಯಾವಸ್ಥೆಗೆ ಮರಳುವ, ಆ ದಿವ್ಯಾನುಭವದ ಸೂರ್ಯಾಸ್ತವನ್ನು ಮತ್ತೆ ಅನುಭವಿಸುವ ಆ ಕ್ಷಣವು ನನ್ನ ಪಾಲಿಗೆ ಬಹಳ ವಿಶೇಷವಾಗಿತ್ತು. ನಾನು ಉಸಿರು ಬಿಗಿಹಿಡಿದು ಕಾಯುತ್ತಿದ್ದೆ; ಉಳಿದವರೂ ಮೌನವಾಗಿ ನನ್ನೊಡನೆ ಸೇರಬಹುದೆಂದು ನಿರೀಕ್ಷಿಸುತ್ತಿದ್ದೆ. ಆದರೆ ನನ್ನ ಸ್ನೇಹಿತರು ಯಾವುದೋ ಒಂದು ವಿಷಯವನ್ನು ಗಂಭೀರವಾಗಿ ಚರ್ಚಿಸುತ್ತಿದ್ದರು. ನಾನು ಅವರನ್ನು ಅಡ್ಡಿಪಡಿಸಲಿಲ್ಲ. ಅದೇ ಹಳದಿ-ಕೆಂಪು ಬಣ್ಣದ ಗೋಳವು ಮೆಲ್ಲಗೆ ಜಾರುತ್ತ, ಚೆಲುವು ಹಾಗೂ ಚೈತನ್ಯಭರಿತ ವರ್ಣಗಳನ್ನು ಹೊರಚೆಲ್ಲುತ್ತ ದಿಗಂತದಲ್ಲಿ ಕರಗಿಹೋಯಿತು. ನನ್ನ ಸ್ನೇಹಿತರು ತಮ್ಮ ಚರ್ಚೆಯಲ್ಲಿ ನಿರತರಾಗಿದ್ದಾಗಲೇ ಯಾರ ಗಮನಕ್ಕೂ ಬಾರದ ಸಂಧ್ಯಾವೈಭವವು ನಿಧಾನವಾಗಿ ಮರೆಯಾಯಿತು. ನಾವು ಏನನ್ನು ಕಳೆದುಕೊಂಡಿದ್ದೇವೆಂದರೆ ನಮ್ಮಲ್ಲಿದ್ದ ಮಗುವನ್ನು, ಅಂದರೆ ನಮ್ಮ ಮುಗ್ಧತೆಯನ್ನು ಎಂಬುದನ್ನು ನಾನು ವಿಷಾದದಿಂದ ಗಮನಿಸಿದೆ.

ನಮ್ಮ ಮುಗ್ಧತೆಗೆ ಮರಳುವುದು ಒಂದು ಆಧ್ಯಾತ್ಮಿಕ ಪಯಣ. ಅಲ್ಪ ಕಾಲದ ಮಟ್ಟಿಗಾದರೂ ಸ್ಪರ್ಧಾತ್ಮಕ ಪ್ರಪಂಚದ ಭ್ರಷ್ಟತೆಗಳನ್ನು ಬದಿಗೆ ಸರಿಸಿ, ಸೃಷ್ಟಿಯ ಸತ್ಯ ಮತ್ತು ಸೌಂದರ್ಯಗಳನ್ನು ಸವಿಯಲು ನಾವು ಮುಗ್ಧತೆಗೆ ಮರಳಬೇಕಾಗುತ್ತದೆ. ನಾವು ದಿವ್ಯ ಮುಗ್ಧತೆಗೆ ಮರಳಲು ಮತ್ತು ಸಮಾಧಿಯನ್ನು ಅನುಭವಿಸಲು ಧ್ಯಾನ ಮಾಡುತ್ತೇವೆ. ಕ್ರಿಸ್ತನು, "ಭಗವಂತನ ಸಾಮ್ರಾಜ್ಯಕ್ಕೆ ಪ್ರವೇಶ ಪಡೆಯಲು ನೀವು ಮಗುವಾಗಬೇಕಾಗುತ್ತದೆ", ಎಂದು ಹೇಳಿದ್ದಾನೆ. ಆತನೊಬ್ಬ ಮಹಾತ್ಮ, ತಾನು ಹೇಳುವುದರ ಬಗ್ಗೆ ಆತನಿಗೆ ಸಂಪೂರ್ಣ ಅರಿವಿತ್ತು.

ಗಂಭೀರ ಕಾಯಿಲೆಗೆ ತುತ್ತಾಗಿದ್ದ ಒಬ್ಬ ವೃದ್ಧರನ್ನು ನಿನ್ನೆ ನಾನು ಭೇಟಿಯಾಗಿದ್ದೆ. ತಾನಿನ್ನು ಕೆಲವೇ ದಿನಗಳ ಕಾಲ ಬದುಕಿರುವುದು ಎಂಬ ಅರಿವಿದ್ದರೂ ಅವರಿಗೆ ಅದರ ಚಿಂತೆ ಇರಲಿಲ್ಲ. ಅವರು ಸಾಯಲು ಸಿದ್ಧವಾಗಿದ್ದರು. ಅವರು ಯಾರೊಂದಿಗೂ ಯಾವುದರೊಂದಿಗೂ ವಾಂಛಲ್ಯ ಬೆಳೆಸಿಕೊಂಡಿರಲಿಲ್ಲ. ಅದನ್ನು ನೋಡಿ ನಾನು ಬಹಳ ವಿಚಲಿತನಾಗಿದ್ದೆ. ಅವರು ತೀರ ಅಪರೂಪದ ವ್ಯಕ್ತಿಯೂ ನಿಜವಾದ ಧಾರ್ಮಿಕರೂ ಆಗಿದ್ದರು. ಅವರೊಂದಿಗೆ ಮಾತನಾಡುವುದು ಹಾಗೂ ಅವರನ್ನು ಪರಿಚಯಿಸಿಕೊಳ್ಳುವುದು ಅತ್ಯಂತ ಅಪೂರ್ವ ಅನುಭವವಾಗಿತ್ತು. ಅಲ್ಲದೆ, ತಮ್ಮ ಭಾವನಾತ್ಮಕ ಸಮಸ್ಯೆ ಅಥವಾ ಅಹಂನ ಸಮಸ್ಯೆಗಳಿಂದ ಉದ್ವಿಗ್ನರಾಗಿ, ಅಧ್ಯಾತ್ಮದ ಹಾದಿಯನ್ನು ಹಿಡಿಯದೆ, ತತ್‌ಕ್ಷಣದಲ್ಲಿ ಲೌಕಿಕ ಲಾಭಗಳು ತಮ್ಮದಾಗಬೇಕೆಂದು ಬಯಸಿ, ನನ್ನನ್ನು ಮಾತನಾಡಿಸಲು ತೀವ್ರವಾಗಿ ಹಾತೊರೆಯುತ್ತಿರುವ ಜನರ ಮಧ್ಯೆ ಈ ಅನುಭವ ಹರ್ಷದಾಯಕವಾಗಿತ್ತು. ಇಡೀ ದಿನ ಅವರು ನನ್ನ ಮನಸ್ಸು ಮತ್ತು ಯೋಚನೆಗಳನ್ನು ಆವರಿಸಿಕೊಂಡಿದ್ದರು. ನನಗೆ ಅವರಂತೆ ಪರಿಪೂರ್ಣ ವೈರಾಗ್ಯ ಸ್ಥಿತಿಯನ್ನು ಹೊಂದುವಾಸೆ.

ಅಪರೂಪದ ಏಪ್ರಿಲ್ ವೃಷ್ಟಿಗಳು ತಪೋನಗರದ ಪ್ರಕೃತಿಗೆ ತಂಪನ್ನೆರೆದು ಚೈತನ್ಯ ತುಂಬಿದವು. ನಾವು ಎರಡು ವರ್ಷಗಳ ಹಿಂದೆ ನೆಟ್ಟಿದ್ದ ಪುಟ್ಟ ಸಸ್ಯವೊಂದು ತನ್ನ ಚೊಚ್ಚಲು ಕೆಂಪು ಹೂಗಳ ಗೊಂಚಲನ್ನು ಹೊತ್ತು ಮುಗುಳ್ನಗುತ್ತಿದೆ. ಅದು ತರುವ ಆನಂದ ಮತ್ತು ಸಂಭ್ರಮ ಮಾತಿಗೆ ಮೀರಿದ್ದು. ಇದನ್ನು ಯಾರಾದರೂ ಗಮನಿಸಿದರೋ, ಅನುಭವಿಸಿದರೋ ನಾನರಿಯೆ. ಎಲ್ಲರೂ ಅನುಭವಿಸಬೇಕೆಂಬುದು ನನ್ನಾಸೆ. ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 4)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಆಯುಧ ಪೂಜೆಯ ಸಂದರ್ಭದಲ್ಲಿ, ತಪೋನಗರದ ನಿವಾಸಿಗಳು ತಮ್ಮ ವಾಹನಗಳಿಗೆ ದೈವೀ ಬೆಳಕನ್ನು ಹರಿಸುವ ಮೂಲಕ ಅವುಗಳನ್ನು ಚೈತನ್ಯೀಕರಿಸಿದರು.

### ಸುದ್ದಿ-ಸೂಚನೆ

- 24-11-2013ರಂದು ತಪೋನಗರದಲ್ಲಿ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಭಾಗವಹಿಸಲು ಬಯಸುವವರು ತಮ್ಮ ಹೆಸರನ್ನು ದಿನಾಂಕ 21-11-2013ರೊಳಗೆ ಮಾನಸ ಕಚೇರಿಯಲ್ಲಿ ರಿಜಿಸ್ಟರ್ ಮಾಡಬೇಕೆಂದು ವಿನಂತಿ.
- ಅಂದಿನ ಕಾರ್ಯಕ್ರಮದಲ್ಲಿ – "Experiences of Light Channels Vol-2" ಪುಸ್ತಕವನ್ನು ಮತ್ತು 2012ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ನಡೆದ ಗುರೂಜಿಯವರೊಂದಿಗಿನ 'ಅನೌಪಚಾರಿಕ ಮಾತುಕತೆ'ಯ DVDಯನ್ನು ಬಿಡುಗಡೆ ಮಾಡಲಾಗುವುದು.
- 2013ನೇ ಇಸವಿಯ ಅಕ್ಟೋಬರ್ ತಿಂಗಳಿನಿಂದ ಭಾನುವಾರದ ಉಪನ್ಯಾಸಗಳ DVDಯು ಲಭ್ಯವಿದೆ. ಅದಕ್ಕೆ ಚಂದಾದಾರರಾಗಬಯಸುವವರು ವಿವರಕ್ಕಾಗಿ ನಮ್ಮ ಕಚೇರಿಯನ್ನು ಸಂಪರ್ಕಿಸಬಹುದು.
- 2014ರಲ್ಲಿ ಪ್ರಾರಂಭವಾಗುವ ಶಂಬಲ ಗ್ರೂಪ್‌ನ ಹೊಸ ಬ್ಯಾಚ್‌ಗೆ ಸೇರಬಯಸುವ ಸಾಧಕರು, 30-12-2013ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

  ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- 2014ನೇ ವರ್ಷದ ಡೆಸ್ಕ್ ಕ್ಯಾಲೆಂಡರ್ ಡಿಸೆಂಬರ್ ತಿಂಗಳ ಕೊನೆಯಲ್ಲಿ ಲಭ್ಯವಿರುತ್ತದೆ. ಆಸಕ್ತಿಯುಳ್ಳವರು ದಯವಿಟ್ಟು 15-12-2013 ರೊಳಗಾಗಿ ಮಾನಸ ಆಫೀಸಿನಲ್ಲಿ ನೊಂದಾಯಿಸಬೇಕೆಂದು ಕೋರುತ್ತೇವೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶನಿ | ನರಕ ಚತುರ್ದಶಿ |
| 03 | ಭಾನು | ಮಹಾಲಕ್ಷ್ಮೀ ಪೂಜೆ<br>ದೀಪಾವಳಿ<br>ಅಮಾವಾಸ್ಯೆ<br>ಸೂರ್ಯಗ್ರಹಣ:<br>ಸಾಯಂಕಾಲ 3.34 ರಿಂದ<br>ರಾತ್ರಿ 8.58 ರವರೆಗೆ |
| 10 | ಭಾನು | ಶುಕ್ಲ ಅಷ್ಟಮಿ |
| 12 | ಮಂಗಳ | ಶುಕ್ಲ ದಶಮಿ |
| 17 | ಭಾನು | ಪೂರ್ಣಿಮಾ |
| 18 | ಸೋಮ | ವಿಷ್ಣು ದೀಪ |
| 23 | ಶನಿ | ಗುರೂಜಿಯವರ<br>ಮಹಾಸಮಾಧಿ ದಿನ |
| 24 | ಭಾನು | ಗುರೂಜಿಯವರ<br>ಮಹಾಸಮಾಧಿ ಕಾರ್ಯಕ್ರಮ |
| 26 | ಮಂಗಳ | ಕೃಷ್ಣ ಅಷ್ಟಮಿ |

### ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ
**ಭಾನುವಾರ, 24-11-2013**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ ಭಾಷಣ<br>ಭಾಷಣಗಳು<br>ಪುಸ್ತಕ ಮತ್ತು DVDಯ ಬಿಡುಗಡೆ<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್‌ನ ಕಾರ್ಯಕ್ರಮ

**23-11-2013 ರಂದು ಬೆಳಿಗ್ಗೆ 11 ಘಂಟೆಗೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.**

## ನಿಮಗಾಗಿ

**ಪದ್ಮಜಾ ಬಾಲಾಜಿ; ಅನು: ವರ್ಷಾ ದೀಪಕ್**

ನಾನು, ತುಂಬಿದ ಧ್ಯಾನಕೊಠಡಿಯ ಮೂಲೆಯೊಂದರಲ್ಲಿ ಕುಳಿತಿದ್ದೆ. ನಿಮ್ಮ ದುರ್ಬಲ ಭೌತಿಕ ಆಕೃತಿ ನಿಧಾನವಾಗಿ ಆ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ, ನಿಮ್ಮ ದೈವಿಕ ಶಕ್ತಿ ಮತ್ತು ದೈವಿಕ ಪ್ರೀತಿ ನನ್ನನ್ನು ಭಾವಪರವಶಗೊಳಿಸಿತು. ಆಗ ನಾನು ಮೌನಕಂಬನಿ ಸುರಿಸಿದೆ.....

ಸಮುದ್ರಾಕಾಶಗಳು ಕೊಟ್ಟವು ಒಂದು ಕಿರು ರಹಸ್ಯವನ್ನು ನನಗೊಮ್ಮೆ
ತಮ್ಮನ್ನು ಚೆನ್ನಾಗಿ ಹೋಲುವವರೊಬ್ಬರನ್ನು ಹಿಡಿದಿಟ್ಟುಕೊಳ್ಳಲು
ಎನ್ನ ಜೀವಕಣದೊಳಗೆ ನಿಮ್ಮ ನುಡಿಗಳು ನಲಿಯಲು ಆರಂಭಿಸುವವರೆಗೆ
ತುಡಿಯಲಿಲ್ಲ ನನ್ನೆದೆಯ ಚಿಟ್ಟೆ ವರುಷಗಳವರೆಗೆ

ನೆರಳುಗಳು ಮಸುಕಾದವು ಒಮ್ಮೆಗೆ ನಾನು ನಿಮ್ಮ ಬೆಳಕನ್ನು ತೊಟ್ಟಾಗ
ಉಜ್ವಲವಾಗಿ ಕಂಡವು ಕಾಮನಬಿಲ್ಲುಗಳು ನನ್ನೆಡಬಲಗಳಲ್ಲಿ
ಓಡಲಾರಂಭಿಸಿದವು ಮಂದ ನಡಿಗೆಯ ನನ್ನ ಕಾಲುಗಳು ನಿಮ್ಮ ಮುಗುಳ್ನಗೆಯ ನೋಡಲು
ಅಲ್ಲದೆ ನಾನು ಹಂಬಲಿಸುತ್ತಿದ್ದೆ ಕೆಲಕಾಲ ನಿಮ್ಮೊಂದಿಗಿರಲು

ನೂರಾರು ಜನರ ಸಮ್ಮುಖದಲ್ಲಿ ಮರೆತೆ ನಾ ಕಣ್ಣುಮಿಟುಕಿಸುವುದನು
ಅನಂತತೆಯ ಮಿನುಗುನೋಟದ ನನ್ನ ಪೆಠಾರಿಯ ನೀವು ತೆರೆದಾಗ
ಒಳಗಿನಿಂದ ನನ್ನ ಜೀವನದ ಮಲಿನ ವಸ್ತ್ರವು
ಹೊಳೆಯಿತು ಅಲೆಮಾರಿಯ ಪೂರ್ವನಿಯೋಜಿತ ಸಂಘರ್ಷದಂತೆ

ದೇವ ದೇವತೆಗಳು ಅತ್ಯಾಶ್ಚರ್ಯದಿಂದ ಚರ್ಚಿಸುತ್ತಿದ್ದುದ ನಾ ಕಂಡೆ
ಸಮುದ್ರಾಕಾಶಗಳು ಹೇಗೆ ನಿಮ್ಮ ಪ್ರೀತಿಯು ತಮ್ಮ ಪ್ರಮಾಣವಾಗಲೆಂದು ಗುಟ್ಟಾಗಿ ಆಶಿಸಿದಂತೆ
ತಿಳಿಯಾದುವು ನನ್ನ ಸಂದೇಹಗಳು ನಾನ್ಯಾಕೆ ಹೋರಾಡಿದೆ ನನ್ನ ಕಂಬನಿಗಳ ಜೊತೆ
ಓ! ಅತಿ ಕಿರಿದಾದ ನನ್ನ ಪಾತ್ರವನ್ನೂ ತುಂಬಿದಿರಿ ಹೊಳೆವ ಬಣ್ಣದಿ ನೀವು!!

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ವರ್ಷಾ ದೀಪಕ್**

ಗುರೂಜಿಯವರು ಭೌತಿಕ ಮಟ್ಟವನ್ನು ಮೀರಿ ತಪೋನಗರದಲ್ಲಿ ವಿಲೀನರಾಗಿ ಒಂದು ವರ್ಷವಾಯಿತು. ಅವರು ನಮ್ಮಲ್ಲಿ ಪ್ರತಿಯೊಬ್ಬರೊಡನೆ ಇರುವುದು ಬಹುತೇಕ ಧ್ಯಾನಿಗಳ ಧ್ವನಿಗಳಲ್ಲಿ ಸತತವಾಗಿ ಮಾರ್ದನಿಸುತ್ತಿದೆ. ನಮ್ಮ 'ಆಧ್ಯಾತ್ಮಿಕ ಸಲಹಾ ಸಮಿತಿ' ಮತ್ತು ಟ್ರಸ್ಟಿಗಳ ತಂಡ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಗುರೂಜಿಯವರ ಆಡಳಿತ ಮೌಲ್ಯಗಳನ್ನು ಕಾಣಬಹುದು. ಅವರು ನಿಖರತೆಯಿಂದ ನಿರ್ವಹಿಸುತ್ತಿದ್ದ ಮಾನಸ ಫೌಂಡೇಶನ್‌ನ ಕೆಲಸವು ಈಗಲೂ ಅದರ ಆಡಳಿತ ಕಚೇರಿಯಲ್ಲಿ ಅದೇ ರೀತಿ ಮುಂದುವರಿಯುತ್ತಿದೆ. ಅವರ ಶಿಸ್ತು, ನಮ್ಮ ಕಾರ್ಯಕರ್ತರು ಧ್ಯಾನ ಹೇಳಿಕೊಡುವುದರಲ್ಲಿ, ನಡೆಸುತ್ತಿರುವ ದೀಕ್ಷಾ ಕಾರ್ಯಕ್ರಮಗಳಲ್ಲಿ ಮತ್ತು ಮಾಡುವ ತಿಂಗಳ ಆಧ್ಯಾತ್ಮಿಕ ಚೆಕ್–ಅಪ್‌ಗಳಲ್ಲಿ ಎದ್ದು ಕಾಣುತ್ತಿದೆ.

ಗುರೂಜಿಯವರು ಆರಂಭಿಸಿದ 'ಬೆಳಕಿನಿಂದ ಕ್ರಾಂತಿ' ಕಾರ್ಯಕ್ರಮವು ಅವರು ಬಯಸಿದಂತೆ ಒಂದು ಪೂರ್ವ ವ್ಯವಸ್ಥಿತ ರೂಪದಲ್ಲಿ ಮುಂದುವರಿಯುತ್ತಿರುವಂತೆಯೇ, ನಮ್ಮ ನಿಷ್ಠಾವಂತ ಲೈಟ್ ಚಾನಲ್ಸ್ ಕಾರ್ಯಕರ್ತರ ಮುಖಾಂತರ ಗುರೂಜಿಯವರ ದೂರದೃಷ್ಟಿಯ ಬೆಳಕಿನ ಯುಗವು ಉದಯಿಸುತ್ತಿದೆ. ನಮ್ಮ ಅಧ್ಯಯನ ಕೇಂದ್ರದ ಪ್ರಾಜೆಕ್ಟ್ ಮೇಲಿನ ಗುರೂಜಿಯವರ ನಂಬಿಕೆಯು ಅದರ ಸದಸ್ಯರ ಸತತ ಪ್ರಯತ್ನಗಳಲ್ಲಿ ಪ್ರತಿಫಲಿಸುತ್ತಿದೆ. ಹಳ್ಳಿಯ ಮಕ್ಕಳಿಗಾಗಿ ಇರುವ ಜ್ಯೋತಿ ಪ್ರಾಜೆಕ್ಟ್ ಮತ್ತು ಕಂಪ್ಯೂಟರ್ ತರಗತಿಗಳ ಮೂಲಕ ಸುತ್ತಲಿನ ಹಳ್ಳಿಯ ಜನರಿಗೆ ಅವರ ಸಹಾಯ ಹಸ್ತವು ಇನ್ನೂ ದೊರಕುತ್ತಿದೆ.

ಗುರೂಜಿಯವರು ಇಲ್ಲಿ ಸ್ಥಾಪಿಸಿರುವ ಅತಿ ವಿರಳ ಚೈತನ್ಯಗಳು ಧ್ಯಾನಿಗಳಿಗೆ ಸಹಾಯಮಾಡುವುದನ್ನು ಮುಂದುವರಿಸಿವೆ. ಭವಿಷ್ಯತ್ತಿಗಾಗಿ ಹೆಚ್ಚಿನ ಜ್ಞಾನಗಳನ್ನು ಮೆಡಿಟೇಶನ್ ಹಾಲ್‌ಗಳು ಹೊಂದಿವೆ. ಸಮಾರಂಭದಂತಾಗಿರುವ ಪ್ರತಿ ನಿವಾಸಿಗಳ ಕೂಟದಲ್ಲಿ ಗುರೂಜಿಯವರ ಸಂತೋಷವನ್ನು ಅನುಭವಿಸಬಹುದಾಗಿದೆ. ಒಂದು ಆಧ್ಯಾತ್ಮಿಕ ಸಮುದಾಯವನ್ನು ಹುಟ್ಟುಹಾಕುವಲ್ಲಿನ ಅವರ ಗೆಲುವು ಇಲ್ಲಿ ಹೆಚ್ಚುತ್ತಿರುವ ತಪೋನಗರದ ನಿವಾಸಿಗಳ ಮತ್ತು ಅನಿವಾಸಿಗಳ ಸಂಖ್ಯೆಯಲ್ಲಿ ಎದ್ದು ಕಾಣುತ್ತಿದೆ.

ಗುರೂಜಿಯವರಂಥ ಒಬ್ಬ ಆಧ್ಯಾತ್ಮಿಕ ಮಾಸ್ಟರ್ ಮುಂದಿನ ಹಲವಾರು ತಲೆಮಾರುಗಳಿಗಾಗಿ ಜನ್ಮವೆತ್ತುತ್ತಾರೆ. ಮಾನಸ ಫೌಂಡೇಶನ್‌ನ ಆರಂಭದ ಈ ಇಪ್ಪತ್ತೈದು ವರ್ಷಗಳು, ಗುರೂಜಿಯವರ ಕೆಲಸವು ಈಗಷ್ಟೇ ಪ್ರಾರಂಭವಾಗಿದೆ ಎಂದು ತೋರಿಸುತ್ತದೆ. ಅವರ ದೂರದೃಷ್ಟಿಯು ಅವರನ್ನು ಪ್ರೀತಿಸುವ ಎಲ್ಲರ ಮುಖಾಂತರ ನಿರಂತರವಾಗಿ ಅಭಿವ್ಯಕ್ತಗೊಳ್ಳುತ್ತಿರುತ್ತದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿ ಹೀಗೆ ನುಡಿದರು

(ಸಂ: ಶೋಭಾ ಕೆ.ರಾವ್; ಅನು: ಸುಧಾಕರ್)

ಫೆಬ್ರವರಿ 2004

ತಪೋನಗರ ಒಂದು ಕನಸು. ದೇವರು ಇಡೀ ಸೃಷ್ಟಿಯ ಕನಸನ್ನು ಕಂಡರು. ಋಷಿಗಳು ತಪೋನಗರದ ಕನಸು ಕಂಡರು. ಋಷಿಗಳು ವಿಶ್ವಚೇತನ ಮಂದಿರ ಮತ್ತು ತಪೋವನದ ಕನಸು ಕಂಡರು. ನಾವು ಕೂಡ ಈ ಅದ್ಭುತ ಕನಸಿನ ಒಂದು ಭಾಗ. ಇದರ ಅರಿವು ನಮಗಿರಲಿ ಹಾಗೂ ಇದಕ್ಕಾಗಿ ನಾವು ಹೆಮ್ಮೆ ಪಡೋಣ.

ಈ ಲೋಕದಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಎರಡು ಪರಸ್ಪರ ವಿರುದ್ಧವಾದ ಶಕ್ತಿಗಳಿವೆ ಎಂದು ನಮಗೆ ತಿಳಿದಿದೆ. ಈ ಶಕ್ತಿಗಳು ಜನರನ್ನು ಪ್ರವೇಶಿಸಿ ಕೆಲಸ ಮಾಡುತ್ತವೆ. ಅವರನ್ನು ಎರಡು ವಿರುದ್ಧ ದಿಕ್ಕಿನಲ್ಲಿ ತಳ್ಳುತ್ತವೆ. ಯಾರಲ್ಲಿ ಸಕಾರಾತ್ಮಕ ಭಾವನೆಗಳು ಮತ್ತು ಆಲೋಚನೆಗಳಿರುತ್ತವೆಯೋ ಅವರು ಒಳ್ಳೆಯ ಶಕ್ತಿಯನ್ನು ಆಕರ್ಷಿಸುತ್ತಾರೆ. ಈ ಜನರು ಋಷಿಗಳ ಕನಸಿಗೆ ಘನತೆ ತರುತ್ತಾರೆ. ನಕಾರಾತ್ಮಕ ಭಾವನೆಗಳು ತಮ್ಮ ಮೇಲೆ ಪ್ರಭಾವ ಬೀರಲು ಯಾರು ಅವಕಾಶ ನೀಡುತ್ತಾರೋ, ಅಂಥವರು ಸದಾ ಈ ವಿಶ್ವದಲ್ಲಿನ ಸೃಜನಾತ್ಮಕ ಶಕ್ತಿಗಳಿಗೆ ವಿರುದ್ಧವಾಗಿ ಕೆಲಸ ಮಾಡುವಂಥ ದುಷ್ಟಶಕ್ತಿಗಳನ್ನು ಸಹಜವಾಗಿಯೇ ಆಕರ್ಷಿಸುತ್ತಾರೆ. ನಾವು ಎಚ್ಚರಿಕೆಯಿಂದ ಸಕಾರಾತ್ಮಕ ಚೈತನ್ಯಗಳನ್ನೇ ಆಕರ್ಷಿಸಬೇಕು, ಏಕೆಂದರೆ ಅವುಗಳು ನಾವು ಯಾವಾಗಲೂ ದೇವರ ಸನಿಹದಲ್ಲಿರುವಂತೆ ನೋಡಿಕೊಳ್ಳುತ್ತವೆ ಹಾಗೂ ನಾವು ಸದಾ ಆನಂದದಿಂದ ಇರುತ್ತೇವೆ. ಆಗ ಎಲ್ಲಾ ಸಮಸ್ಯೆಗಳ ಮಟ್ಟದಿಂದ ನಮಗೆ ಮೇಲೇರಲು ಸಾಧ್ಯವಾಗುತ್ತದೆ ಹಾಗೂ ಅಂತ್ಯ ಬಂದಾಗ, ನಾವು ದೇವರ ಬಳಿಗೆ ಹಿಂದಿರುಗುತ್ತೇವೆ.

ಕೆಟ್ಟ ಶಕ್ತಿಗಳು ನಮಗೆ ದುಃಸ್ಥಿತಿಯನ್ನು, ಸಮಸ್ಯೆಗಳನ್ನು ತರುತ್ತವೆ. ನಮ್ಮಲ್ಲಿ ಗೊಂದಲವನ್ನು ಉಂಟುಮಾಡಿ, ಈ ಸೃಷ್ಟಿಯನ್ನು ನಾವು ಆನಂದಿಸಲಾಗದಂತೆ ಮಾಡುತ್ತವೆ. ದೇವರಲ್ಲಿಗೆ ಹಿಂದಿರುಗಲು ನಮಗೆ ಬಹಳ ಸಮಯ ಬೇಕಾಗುತ್ತದೆ. ನಾವು ಯಾವಾಗಲೂ ಸಕಾರಾತ್ಮಕ ಯೋಚನೆ ಮತ್ತು ಭಾವನೆಗಳನ್ನು ಹೊಂದಿರೋಣ. ಅಹಂಕಾರ ಬೇಡ. ಎಲ್ಲ ಆಧ್ಯಾತ್ಮಿಕ ಕೆಲಸಗಳಿಗೂ ಕೆಟ್ಟ ಶಕ್ತಿಗಳು ಅಡಚಣೆಯನ್ನುಂಟು ಮಾಡುತ್ತವೆ. ಯಾವುದೇ ಒಳ್ಳೆಯ ಕೆಲಸವೂ ಸುಗಮವಾಗಿರುವುದಿಲ್ಲ ಎನ್ನುವುದನ್ನು ನಾವು ತಿಳಿಯಬೇಕು. ನಮ್ಮ ಸಾಧನೆ ಸುಗಮವಾಗಿರುವುದಿಲ್ಲ; ನಮಗೆ ಯಾವಾಗಲೂ ಅಡಚಣೆಗಳು, ಚಿತ್ತವಿಕ್ಷೇಪ ಹಾಗೂ ನಿರುತ್ಸಾಹಗೊಳಿಸುವ ಸಂದರ್ಭಗಳಿರುತ್ತವೆ. ಋಷಿಗಳೊಂದಿಗಿನ ಮತ್ತು ಆಧ್ಯಾತ್ಮಿಕ ಜೀವನದ ನನ್ನ ಹಲವಾರು ವರ್ಷಗಳ ಅನುಭವದ ಮೇರೆಗೆ, ನಿಮಗೆ ಋಷಿಗಳಲ್ಲಿ ನಂಬಿಕೆಯಿದ್ದರೆ, ನಾವು ಅವರಿಗೆ ಶರಣಾದರೆ ಅವರು ನಮ್ಮ ಇಡೀ ಜೀವನವನ್ನು ನೋಡಿಕೊಳ್ಳುತ್ತಾರೆ.

ವಿಶ್ವಚೇತನ ಮಂದಿರ ಒಂದು ಮುಖ್ಯವಾದ ಕಟ್ಟಡ. ಇದು ಈ ವಿಶ್ವದ ಎಲ್ಲ ಸಕಾರಾತ್ಮಕ ಮತ್ತು ದೈವೀ ಚೈತನ್ಯಗಳನ್ನು ಒಳಗೊಂಡಿದೆ. ಬೇರೆ ಲೋಕಗಳಿಗೆ ಅಥವಾ ಬೇರೆ ಆಯಾಮಗಳಿಗೆ ಇಲ್ಲಿಂದ ದ್ವಾರಗಳಿವೆ. ಸಪ್ತ ಲೋಕಗಳ ಚೈತನ್ಯಗಳನ್ನು ಶೇಖರಿಸಲು ಏಳು ಕೊಠಡಿಗಳನ್ನು ಮತ್ತು ನಾಲ್ಕು ದೈವೀ ಲೋಕಗಳ ಚೈತನ್ಯಗಳನ್ನು ಶೇಖರಿಸಲು ಇನ್ನೂ ನಾಲ್ಕು ಕೊಠಡಿಗಳನ್ನು ನಮ್ಮ ಋಷಿಗಳು ಸದ್ಯದಲ್ಲೇ ನಿರ್ಮಿಸುತ್ತಾರೆ. ಸುರಂಗಮಾರ್ಗಗಳನ್ನು ಅವರು ನಿರ್ಮಿಸುತ್ತಾರೆ. ಇದೊಂದು ಅದ್ಭುತವಾದ ಕಟ್ಟಡ ಮತ್ತು ವಿಶೇಷ ಸ್ಥಳವಾಗಿದ್ದು, ಇಲ್ಲಿ ಧ್ಯಾನ ಮಾಡುತ್ತಾ ನಮಗಿಷ್ಟವಾದ ಆಯಾಮವನ್ನು ನಾವು ಪ್ರವೇಶಿಸಬಹುದು, ಅತ್ಯುನ್ನತ ಹಂತದ ಪ್ರಜ್ಞಾವಲಯವನ್ನು ತಲುಪಬಹುದು. ಇಂದು ಬೆಳಿಗ್ಗೆ ಈ ಮಂದಿರವನ್ನು ಋಷಿಗಳು ಚೈತನ್ಯೀಕರಿಸಿದರು. ಇದೊಂದು ಚಿಕ್ಕ ಭೌತಿಕ ವಿಶ್ವ. ಇಲ್ಲಿ ಕೆಳಸ್ತರದ ಲೋಕಗಳನ್ನು ಬಿಟ್ಟರೆ ಮತ್ತೆಲ್ಲವೂ ಇದೆ.

ತಪೋವನದಲ್ಲಿರುವ ಸಪ್ತ ಋಷಿಗಳ ವಿಗ್ರಹಗಳನ್ನು ಕೂಡ ಋಷಿಗಳು ಚೈತನ್ಯೀಕರಿಸಿದ್ದಾರೆ. ಪ್ರತಿಯೊಬ್ಬ ಋಷಿಯೂ ತನ್ನ ಅಂಶವನ್ನು ಅಥವಾ ತನ್ನ ಚೈತನ್ಯವನ್ನು ತನ್ನ ವಿಗ್ರಹದಲ್ಲಿರಿಸಿದ್ದಾರೆ. ನಾವು ಚೈತನ್ಯಗಳನ್ನು ಅರ್ಪಿಸುವುದರ ಮುಖಾಂತರ ಆ ವಿಗ್ರಹವನ್ನು ನಿಯತವಾಗಿ ಪೂಜಿಸಿದಾಗ, ಆ ವಿಗ್ರಹದ ಒಳಗಿರುವ ಚೈತನ್ಯ ವಲಯವು ಬಲಗೊಳ್ಳುತ್ತದೆ. ನಾವು ಅಲ್ಲಿಗೆ ಹೋಗಿ ಕುಳಿತು ಋಷಿಗಳೊಂದಿಗೆ ಸಂಭಾಷಿಸಬಹುದು. ಅಲ್ಲಿ ಋಷಿಗಳನ್ನು ಸಂಪರ್ಕಿಸುವುದು ಬಹಳ ಸುಲಭ.

ತಪೋವನದಲ್ಲಿರುವ ಏಳು ಚಕ್ರಗಳನ್ನು ಪ್ರತಿನಿಧಿಸುವ ಮಂಟಪಗಳನ್ನು ಕೂಡಾ ಋಷಿಗಳು ಚೈತನ್ಯೀಕರಿಸಿದರು ಮತ್ತು ಅವುಗಳ ಕೆಳಗೆ ಚೈತನ್ಯಗಳನ್ನು ಸ್ಥಾಪಿಸಿದರು. ವಿವಿಧ ಚಕ್ರಗಳ ಹಂತದಲ್ಲಿರುವ ಧ್ಯಾನಿಗಳು, ಕ್ರಮವಾಗಿ ತಮ್ಮ ತಮ್ಮ ಹಂತದ ಮಂಟಪಕ್ಕೆ ಹೋಗಿ ಧ್ಯಾನ ಮಾಡಬಹುದು. ಆ ಹಂತದ ಚೈತನ್ಯಗಳನ್ನು ಮತ್ತು ಆ ಚಕ್ರದ ಪ್ರಯೋಜನಗಳನ್ನು ಅವರು ಪಡೆದುಕೊಳ್ಳುತ್ತಾರೆ ಮತ್ತು ಅತಿ ಶೀಘ್ರವಾಗಿ ಪ್ರಗತಿ ಸಾಧಿಸುತ್ತಾರೆ. ಉನ್ನತ ಹಂತದಲ್ಲಿ ಧ್ಯಾನ ಮಾಡುತ್ತಿರುವವರು ಯಾವುದೇ ಮಂಟಪದಲ್ಲಿ ಕುಳಿತು, ತಮ್ಮ ಹಂತದಲ್ಲೇ ಉಳಿದುಕೊಂಡು ಈ ಎಲ್ಲ ಚಕ್ರಗಳನ್ನು ಅನುಭವಿಸಬಹುದು.

ಈ ಎಲ್ಲ ಕೆಲಸಗಳ ಹಿಂದೆ ನನ್ನ ಗುರು ಅಮರರವರ ಪ್ರೀತಿ ಮತ್ತು ಅನುಗ್ರಹವಿದೆ. ಋಷಿಗಳ ಕನಸನ್ನು ಸಾಕಾರಗೊಳಿಸಲು ಪ್ರೇರೇಪಿಸಿದವರು, ಮಾರ್ಗದರ್ಶಿಸಿದವರು ಮತ್ತು ಎಲ್ಲ ರೀತಿಯಲ್ಲಿ ಸಹಕಾರ ನೀಡಿದವರು ಅವರೇ. ಈ ಕೆಲಸಗಳು ನಮಗೆ ಕೊಡುಗೆಗಳಾಗಿವೆ. ಅಮರರವರಿಗೆ ನಾವು ಕೊಡಬಹುದಾದ ಹುಟ್ಟುಹಬ್ಬದ ಸಾರ್ಥಕ ಕೊಡುಗೆಯೆಂದರೆ ನಮ್ಮ ಪ್ರೀತಿ, ಸಮರ್ಪಣೆ ಹಾಗೂ ಬೆಳೆಯಬೇಕೆಂಬ ದೃಢ ಸಂಕಲ್ಪ.

ಅಮರರವರು ಪ್ರಸ್ತುತ ಕಾಲವನ್ನು ಮೀರಿ ಬದುಕುತ್ತಿದ್ದುದರಿಂದ ಅವರನ್ನು ಅರ್ಥಮಾಡಿಕೊಳ್ಳಲು ಜನರಿಗೆ ಆಗಲಿಲ್ಲ. ಅವರು ಜೀವಂತವಾಗಿದ್ದಾಗ ಅವರಿಗೆ ಜನರು ಬೆಲೆ ಕೊಡಲಿಲ್ಲ. ಧಾರ್ಮಿಕ ಆಚರಣೆಗಳನ್ನು ಮೀರಿದ ಅನೇಕ ವಿಷಯಗಳಿವೆ ಎಂದು ಅಮರರವರು ನಮಗೆ ಹೇಳಿಕೊಟ್ಟರು. ದೀಪವನ್ನು ಹಚ್ಚದೆ, ಹೂವುಗಳನ್ನು ಅರ್ಪಿಸದೆ ನಾವು ದೇವರನ್ನು ಪೂಜಿಸಬಹುದು ಎಂದು ಅವರು ನಮಗೆ ಹೇಳಿಕೊಟ್ಟರು. ನಮ್ಮಲ್ಲಿರುವ ಅತ್ಯುತ್ತಮವಾದುದೆಂದರೆ ಪ್ರೀತಿ. ಸೃಷ್ಟಿಯಲ್ಲಿರುವ ಅತ್ಯುತ್ತಮವಾದುದೆಂದರೆ ದೇವರ ಚೈತನ್ಯಗಳು. ಚೈತನ್ಯಗಳನ್ನು ಮತ್ತು ಪ್ರೀತಿಯನ್ನು ಅರ್ಪಿಸುವುದರಿಂದ ಅವನನ್ನು ಸಮರ್ಪಕವಾಗಿ ಮತ್ತು ಅತ್ಯುತ್ತಮ ರೀತಿಯಲ್ಲಿ ಪೂಜಿಸಬಹುದು. ವೆಂಕಟೇಶ್ವರನನ್ನು ಪೂಜಿಸಲು ನಾವು ತಿರುಪತಿಗೆ ಹೋಗಬೇಕಾಗಿಲ್ಲ ಎಂದು ನಮಗೆ ತಿಳಿಸಿದರು. ಶುದ್ಧವಾದ, ವಿಕೃತಗೊಳ್ಳದ ಜ್ಞಾನವನ್ನು ಅವರು ನಮಗೆ ಕೊಟ್ಟರು. ಅವರು ಸೂಕ್ಷ್ಮ ಪ್ರಪಂಚಗಳನ್ನು ಮತ್ತು ಋಷಿಗಳನ್ನು ನಮಗೆ ಪರಿಚಯಿಸಿದರು. ಬೆಳಕನ್ನು, ವಿವೇಕದ ಮತ್ತು ಜ್ಞಾನದ ಬೆಳಕನ್ನು ಅವರು ನಮಗೆ ಕೊಟ್ಟರು. ಆದರೆ ಈ ಬೆಳಕು ನಮ್ಮಲ್ಲಿ ಕೆಲವರಿಗೆ ಕಾಣಿಸುತ್ತಿಲ್ಲ, ಏಕೆಂದರೆ ನಾವು ಕಣ್ಣುಮುಚ್ಚಿಕೊಂಡಿದ್ದೇವೆ! ಆದರೆ ಬೆಳಕು ಸರ್ವಕಾಲಕ್ಕೂ ಇರುತ್ತದೆ. ಅನೇಕರು ಇದಕ್ಕೆ ತಮ್ಮನ್ನು ತೆರೆದುಕೊಂಡಿದ್ದಾರೆ ಹಾಗೂ ಇತರರು ಖಂಡಿತವಾಗಿಯೂ ಮುಂದೆ ತೆರೆದುಕೊಳ್ಳುತ್ತಾರೆ. ನಾವು ಸಾಕಷ್ಟು ಸಮಯ ವ್ಯರ್ಥಮಾಡಿದ್ದೇವೆ. ನಮ್ಮ ಜೀವನದಲ್ಲಿ ಹೆಚ್ಚು ಬೆಳಕನ್ನು ತಂದುಕೊಳ್ಳಬಹುದಾಗಿತ್ತು.

ನೀವಿನ್ನೂ ಸಾಧನೆಯನ್ನು ಪ್ರಾರಂಭಿಸಿಲ್ಲದಿದ್ದರೆ, ಸಾಧನೆಯನ್ನು ಪ್ರಾರಂಭಿಸುವುದಾಗಿ ಈ ದಿನ ಸಂಕಲ್ಪ ಮಾಡಿ. ಸಾಧನೆ ಮಾಡುತ್ತಿರುವವರು ಅದನ್ನು ತೀಕ್ಷ್ಣಗೊಳಿಸುವ ನಿಶ್ಚಯಮಾಡಿ. ಪ್ರೀತಿಯನ್ನು ಅಭಿವ್ಯಕ್ತಿಸಲು ಪ್ರಾರಂಭಿಸೋಣ, ಏಕೆಂದರೆ ಪ್ರೀತಿ ನಮ್ಮನ್ನು ದೇವರ ಬಳಿಗೆ ಕೊಂಡೊಯ್ಯುತ್ತದೆ. ಪ್ರೀತಿ ಅಧ್ಯಾತ್ಮವಾದದ್ದೆಲ್ಲವನ್ನೂ ತಂದುಕೊಡುತ್ತದೆ; ಈ ಪ್ರೀತಿ ನಮ್ಮನ್ನು ಋಷಿಗಳನ್ನಾಗಿ ಮಾಡುತ್ತದೆ. ಧ್ಯಾನವು ಸಹಕರಿಸುತ್ತದೆ, ಆದರೆ ಅದಕ್ಕಾಗಿ ನಾವು ಪ್ರೀತಿಯನ್ನು ಅಭಿವ್ಯಕ್ತಿಸಲೇಬೇಕು.

ನಾನು ಋಷಿಗಳಿಗೆ ವಿದ್ಯಾರ್ಥಿಯಾಗಿದ್ದರೂ ಬೇರೆಯವರಿಗೆ ನಾನೊಬ್ಬ ಗುರು ಎಂಬ ವಿಷಯ ನಿಮಗೆ ತಿಳಿದಿರಲಿ. ನನ್ನನ್ನು ಒಬ್ಬ ಸ್ನೇಹಿತನಾಗಿ ಅಥವಾ ಸಂಬಂಧಿಕನಾಗಿ ಜನರು ನೋಡಿದಾಗ ಅದರಲ್ಲಿ ತಪ್ಪೇನಿಲ್ಲ, ಆದರೆ ಗುರುವಿನ ಅಂಶ ಅವರಿಗೆ ತಪ್ಪಿ ಹೋಗುತ್ತದೆ. ಈ ಭಾಗವನ್ನು ಗಮನಿಸದಿರುವ ಅಥವಾ ನಿರ್ಲಕ್ಷಿಸುವ ಪ್ರವೃತ್ತಿ ಎಲ್ಲೆಡೆ ಇದೆ. ಇದು ಅಮರರವರೊಂದಿಗೂ ಆಗುತ್ತಿತ್ತು. ಅಮರರವರ ಬಗ್ಗೆ ಸದಭಿಪ್ರಾಯವಲ್ಲದ ಅನೇಕ ಹೇಳಿಕೆಗಳನ್ನು

# ಗುರೂಜಿ ಹೀಗೆ ನುಡಿದರು

(ಸಂ: ಶೋಭಾ ಕೆ.ರಾವ್; ಅನು: ಸುಧಾಕರ್)

ನಾನು ಕೇಳಿದ್ದೇನೆ. ಆದರೆ ಅವರೊಬ್ಬ ಪರಿಪೂರ್ಣ ಮಾಸ್ಟರ್ ಆಗಿದ್ದರು. ಅನೇಕ ಮಾಸ್ಟರ್‌ಗಳ ಆತ್ಮಕಥೆಯನ್ನು ನಾನು ಓದಿದ್ದೇನಾದರೂ ನನಗೆ ಅಮರರವರಂಥ ಇನ್ನೊಬ್ಬ ವ್ಯಕ್ತಿ ಕಂಡುಬಂದಿಲ್ಲ. ಪ್ರತಿಯೊಬ್ಬ ಮಾಸ್ಟರ್‌ಗೂ ಅವರದೇ ಆದ ವಿಶೇಷತೆಯಿರುತ್ತದೆ. ಅಮರರವರು ದೇವರೊಂದಿಗೆ ಮಾತನಾಡಬಲ್ಲವರಾಗಿದ್ದರು, ಬೇರೆ ಲೋಕಗಳಿಗೆ ಹೋಗುತ್ತಿದ್ದರು ಆದರೂ ಸಾಮಾನ್ಯ ವ್ಯಕ್ತಿಯಂತೆ ವರ್ತಿಸುತ್ತಿದ್ದರು. ನೀವು ಅವರನ್ನು ಭೇಟಿಯಾಗಿರಬೇಕಿತ್ತು ಎಂದು ಆಶಿಸುತ್ತೇನೆ. ಅವರಿಂದ ಬಹಳಷ್ಟನ್ನು ಪಡೆದುಕೊಳ್ಳುತ್ತಿದ್ದಿರಿ!

ತಪೋನಗರ ಜಾಗೃತಗೊಳ್ಳುತ್ತಿದೆ. ಇದನ್ನು ತಿಳಿದು ಸಂತೋಷಪಡೋಣ. ನನಗೆ ಬರುವ ಪ್ರಶ್ನೆಗಳ ಗುಣಮಟ್ಟ ಹೆಚ್ಚಿದೆ. ನಮ್ಮಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಧ್ಯಾನಕೇಂದ್ರಗಳ ಸಂಖ್ಯೆ ಹೆಚ್ಚಾಗಿದೆ. ಇಲ್ಲಿ ನಾನು ಸಂಖ್ಯೆಗಿಂತ ಗುಣಮಟ್ಟದ ಬಗ್ಗೆ ಮಾತನಾಡುತ್ತಿದ್ದೇನೆ. ಅನೇಕರಿಗೆ ಅದ್ಭುತ ಅನುಭವಗಳಾಗುತ್ತಿವೆ, ಅದರಲ್ಲಿ ಕೆಲವರು ಮಾತ್ರ ತಮ್ಮ ಅನುಭವಗಳನ್ನು ಹೇಳುತ್ತಾರೆ, ಆದರೆ ಅನೇಕರು ಹೇಳಲು ಸಂಕೋಚಪಟ್ಟುಕೊಂಡು ಸುಮ್ಮನಿರುತ್ತಾರೆ. ಇವೆಲ್ಲವೂ, ಅಮರರವರು ಪ್ರಾರಂಭಿಸಿದ ಬೆಳಕಿನ ಕೇಂದ್ರ ಬೆಳೆಯುತ್ತಿರುವುದನ್ನು ಸೂಚಿಸುತ್ತವೆ. ಆದರೆ ಕೆಲವೊಮ್ಮೆ, ನನಗೆ ಅಷ್ಟೊಂದು ಸಂತೋಷವಾಗುವುದಿಲ್ಲ. ನೀವು ಬೆಳೆಯುತ್ತಿದ್ದೀರಾದರೂ ಆಧ್ಯಾತ್ಮಿಕ ಜೀವನಕ್ಕೆ ಅದು ಸಾಕಾಗುವುದಿಲ್ಲ! ಪರಿಪೂರ್ಣತೆ ಕೂಡಾ ಸಾಕಾಗುವುದಿಲ್ಲ! ಆದ್ದರಿಂದ ನಾನು ಬಹಳಷ್ಟನ್ನು ನಿರೀಕ್ಷಿಸುತ್ತೇನೆ. ನೀವು ಆಲೋಚಿಸುವಾಗ, ಭಾವಿಸುವಾಗ, ಕಾರ್ಯನಿರತರಾದಾಗ ಮತ್ತು ಜೀವನ ನಡೆಸುವಾಗ ನನ್ನ ಮಾತನ್ನು ನೆನಪಿಸಿಕೊಳ್ಳಿ; ನೀವು ಋಷಿಗಳ ರೀತಿಯಲ್ಲೇ ನಡೆದುಕೊಳ್ಳಬೇಕು, ಇದನ್ನು ನೀವು ಗಮನದಲ್ಲಿಡಿ. ಶಿಸ್ತಿನ ಬಗ್ಗೆ ಎಚ್ಚರವಿರಲಿ ಮತ್ತು ಅವುಗಳನ್ನು ಪಾಲಿಸಿ.

ನಮ್ಮ ಅಹಂ ಅನ್ನು ಮತ್ತು ನಮ್ಮದೇ ದಾರಿಗಳನ್ನು ನಾವು ಬಿಡುವುದಿಲ್ಲ. ಇದು ಸಂಘರ್ಷವನ್ನುಂಟು ಮಾಡುತ್ತದೆ. ಋಷಿಗಳು ಮಾಡಬಹುದಾದ ರೀತಿಯಲ್ಲಿಯೇ ನಾವೂ ನಡೆದುಕೊಳ್ಳಲು ಪ್ರಾರಂಭಿಸಿದರೆ ಸಾಮರಸ್ಯವುಂಟಾಗುತ್ತದೆ. ಜನರು ನನ್ನನ್ನು ಅರ್ಥಮಾಡಿಕೊಂಡರೂ ಕೆಲವೊಮ್ಮೆ ಅವರು ಪ್ರಯಾಸಪಡುತ್ತಾರೆ. ಅವರಿಗೆ ಸಹಾಯ ಮಾಡುವುದಕ್ಕಾಗಿಯೇ ನಾವಿಲ್ಲಿದ್ದೇವೆ. ನಿಮಗೆ ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳಿದ್ದಾಗ ನಮ್ಮಲ್ಲಿಗೆ ಬನ್ನಿ, ಅವನ್ನು ನಿವಾರಿಸಿಕೊಡುತ್ತೇವೆ. ವಿನಮ್ರತೆಯನ್ನು ಬೆಳೆಸಿಕೊಳ್ಳಿ, ಋಷಿಗಳಿಗೆ ಶರಣಾಗಿ. ಆಗ ನಾವು ಸುರಕ್ಷಿತರಾಗಿರುತ್ತೇವೆ ಹಾಗೂ ನಮಗೆ ರಕ್ಷಣೆ ಸಿಗುತ್ತದೆ. ಆದರೆ ಅಹಂಗೆ ನಾವು ಅವಕಾಶಕೊಟ್ಟರೆ ಖಂಡಿತವಾಗಿಯೂ ಅದು ನಮ್ಮನ್ನು ದಾರಿತಪ್ಪಿಸುತ್ತದೆ, ಖಂಡಿತವಾಗಿಯೂ ದೇವರಿಂದ ಮತ್ತು ನಮ್ಮ ಮಾರ್ಗದಿಂದ ದೂರಕ್ಕೆ ಕೊಂಡೊಯ್ಯುತ್ತದೆ. ದೇವರು ನಮ್ಮ ಬಾಳನ್ನು ನಡೆಸಲಿ, ಋಷಿಗಳು ನಮ್ಮ ಬಾಳನ್ನು ನಿರ್ಧರಿಸಲಿ.

ಧ್ಯಾನದಲ್ಲಿ ದೇವರನ್ನು ಬೆಳಕಿನ ರೂಪದಲ್ಲಿ ಅನುಭವಿಸುತ್ತೇವೆ. ಧ್ಯಾನದಲ್ಲಿ, ಯಾವುದಾದರೊಂದು ಹಂತದಲ್ಲಿ ಯಾವುದಾದರೊಂದು ಸಮಯದಲ್ಲಿ ನಾವು ಬೆಳಕನ್ನು ಕಾಣುತ್ತೇವೆ. ನಾವು ಬೆಳಕನ್ನು ನೋಡುವುದಷ್ಟೇ ಅಲ್ಲ ಬೆಳಕನ್ನು ಅಥವಾ ದೇವರನ್ನು ಅನುಭವಿಸುತ್ತೇವೆ ಮತ್ತು ನಾವು ಬೆಳಕೇ ಆಗುತ್ತೇವೆ. ನಮ್ಮಲ್ಲಿ ಕಳವಳ, ದುರ್ಭಾವನೆ, ದೂರುಗಳು, ಗೊಣಗಾಟಗಳು ಇಲ್ಲದಿದ್ದಾಗ, ನಾವು ದೇವರನ್ನು ಶಾಂತಿಯ ರೂಪದಲ್ಲಿ ಅನುಭವಿಸುತ್ತೇವೆ. ಆಕಾಶದ ಬಗ್ಗೆ ನಾವು ಮನನ ಮಾಡಿದಾಗ ಅವನನ್ನು ವೈಶಾಲ್ಯತೆಯಾಗಿ ಅನುಭವಿಸಬಹುದು; ನಮ್ಮ ಆಲೋಚನೆ ಮತ್ತು ಭಾವನೆಗಳನ್ನು ವಿಸ್ತಾರಗೊಳಿಸಿಕೊಳ್ಳುವ ಮೂಲಕ ಈ ವೈಶಾಲ್ಯತೆಯನ್ನು ಬೇರೆ ಮಟ್ಟಗಳಲ್ಲಿ ಕೂಡಾ ಅನುಭವಿಸಬಹುದು. ವೈಶಾಲ್ಯತೆ ಎಲ್ಲಿದೆಯೋ ಅಲ್ಲಿ ದೇವನಿದ್ದಾನೆ ಹಾಗೂ ಅವನನ್ನು ಒಂದು ರೀತಿಯ ಔನ್ನತ್ಯದ ರೂಪದಲ್ಲಿ ಅನುಭವಿಸುತ್ತೇವೆ. ಆ ಔನ್ನತ್ಯದ ಸ್ಥಿತಿಯಲ್ಲಿ ನಾವು ದೇವರನ್ನು ಸಾರ್ಥಕತೆಯ ರೂಪದಲ್ಲಿ ಅನುಭವಿಸಬಹುದು. ದೇವರನ್ನು ತಲುಪಿದಾಗ ಮಾತ್ರ ಒಂದು ರೀತಿಯ ಸಂತೃಪ್ತಿ ಸಿಗುತ್ತದೆ. ಆಗ ನಮ್ಮ ಪ್ರಯಾಣಗಳು ಅಂತ್ಯಗೊಳ್ಳುತ್ತವೆ, ತೊಳಲಾಟಗಳು ಅಂತ್ಯವಾಗುತ್ತವೆ. ನಾವು ಪರಿಶುದ್ಧರಾಗಿದ್ದರೆ ದೇವರನ್ನು ಅನುಭವಿಸುತ್ತೇವೆ. ದೇವರನ್ನು ಅನುಭವಿಸಲು ನಮಗೆ ಅನೇಕ ದಾರಿಗಳಿವೆ. ಪ್ರಕೃತಿಯಲ್ಲಿ, ನಮ್ಮ ಸುತ್ತಮುತ್ತಲಿನ ಜೀವನದ ಆಗುಹೋಗುಗಳಲ್ಲಿ ನಾವು ದೇವರನ್ನು ಅನುಭವಿಸಬಹುದು. ಆದರೆ ನಾವು ಇವೆಲ್ಲದರಿಂದ ದೂರ ಉಳಿದು ದೇವರು ವಿಗ್ರಹದಲ್ಲಿ ಮಾತ್ರವಿದ್ದಾನೆ ಎಂದು ತಿಳಿದಿರುವುದು ವಿಷಾದಕರ. ನಾವು ಆ ಮಟ್ಟದಲ್ಲಿಯೆ ಉಳಿದಿದ್ದೇವೆ. ನಾವು ಮಾತನ್ನು ಕಡಿಮೆಮಾಡೋಣ. ಮೌನತೆಯಲ್ಲಿ ನಮ್ಮೊಳಗೆ ದೇವರನ್ನು ಅನುಭವಿಸುತ್ತೇವೆ. ನಮ್ಮ ಅರಿವನ್ನು ವಿಸ್ತಾರಗೊಳಿಸಿಕೊಳ್ಳಬೇಕು ಮತ್ತು ವಿಸ್ತರಣೆಯಲ್ಲಿ ಮಾತ್ರವೇ ದೇವರನ್ನು ಅನುಭವಿಸಬಹುದು ಎನ್ನುವುದನ್ನು ನಾವು ಮನಗಾಣಬೇಕು.

ಇಲ್ಲಿ ನಿರ್ಮಾಣಗೊಳ್ಳುತ್ತಿರುವ ಉದ್ಯಾನವನ್ನು ಎರಡು ವರ್ಷಗಳ ಹಿಂದೆಯೇ ತನ್ನ ಕನಸಿನಲ್ಲಿ ನೋಡಿದ್ದಾಗಿ ನನ್ನನ್ನು ಇತ್ತೀಚೆಗೆ ಭೇಟಿಯಾದ ಪುಟ್ಟ ಹುಡುಗಿಯೊಬ್ಬಳು ತಿಳಿಸಿದಳು. ಅದು ಆಶ್ಚರ್ಯಕರವಾಗಿತ್ತು. ಈ ಉದ್ಯಾನ ನಿರ್ಮಾಣಗೊಳ್ಳುವುದು ಪೂರ್ವನಿರ್ಧಾರಿತವಾಗಿತ್ತು ಎಂದು ಅದು ಸೂಚಿಸುತ್ತದೆ! ನಾವು ಇದನ್ನು ಮಾಡಿದೆವು ನಾವು ಅದನ್ನು ಮಾಡಿದೆವು ಎಂದು ಸಾಮಾನ್ಯವಾಗಿ ಯೋಚಿಸುತ್ತೇವೆ. ಆದರೆ ನಾವು ನಿಮಿತ್ತ ಮಾತ್ರವಲ್ಲದೆ ಹೆಚ್ಚೇನು ಅಲ್ಲ ಎಂದು ಇದರಿಂದ ನಾವು ಅರಿಯುತ್ತೇವೆ. ನಾವು ಇಲ್ಲಿರಲು ಮತ್ತು ಅವರ ಕೆಲಸಗಳಲ್ಲಿ ಭಾಗವಹಿಸಲು ಋಷಿಗಳು ಅವಕಾಶಕೊಟ್ಟಿದ್ದಕ್ಕಾಗಿ ನಾವು ಕೃತಜ್ಞರಾಗಿರಬೇಕು.

ಒಂದು ಸಣ್ಣ ಬೀಜದಿಂದ ಆಲದಮರದಂತಹ ಬೃಹದಾಕಾರದ ವೃಕ್ಷ ಹುಟ್ಟುತ್ತದೆ ಎಂದು ನಮಗೆ ತಿಳಿದಿದೆ. ಬೀಜದಲ್ಲಿ ವೃಕ್ಷದ ನೀಲಿನಕ್ಷೆ ಹಾಗೂ ಚೈತನ್ಯವಿರುತ್ತದೆ. ಅದೇ ರೀತಿ, ಪ್ರತಿಯೊಬ್ಬ ವ್ಯಕ್ತಿಯೂ ತನ್ನೊಳಗೆ ದೈವತ್ವದ ಮಹಾವೃಕ್ಷವನ್ನು ಹೊಂದಿದ್ದಾನೆ. ಬೀಜದ ವಿಷಯದಲ್ಲಿ ಒಂದು ವೃಕ್ಷ ಮಾತ್ರ ಹೊರಬರುತ್ತದೆ. ಆದರೆ ಒಬ್ಬ ವ್ಯಕ್ತಿಯಲ್ಲಿ ಸಕಾರಾತ್ಮಕ ಭಾಗ ಅಥವಾ ನಕಾರಾತ್ಮಕ ಭಾಗ ಹೊರಬರಬಹುದು. ಇದೊಂದು ದುರಂತ, ಇದೊಂದು ಸವಾಲು ಹಾಗೂ ಇದೊಂದು ಜೀವನದ ಸುಂದರತೆ ಕೂಡಾ. ನಮ್ಮದೇ ಸಂಸ್ಕಾರ, ಕರ್ಮಗಳಿಂದಾಗಿ ಹೀಗಾಗುತ್ತದೆ. ನಮ್ಮ ಸ್ವಂತ ಆಧ್ಯಾತ್ಮಿಕ ವಿಕಸನ, ನಮ್ಮ ಒಡನಾಡಿಗಳು ಹಾಗೂ ನಮ್ಮ ಪ್ರಯತ್ನಗಳಿಂದಾಗಿ ಹೀಗಾಗುತ್ತದೆ. ನಾವು ದೈವತ್ವವನ್ನು ಹೊರತಂದಾಗ ಹಾಗೂ ಸಾಧನೆಯನ್ನು ಬಿಡದೆ ಮುಂದುವರಿಸಿದಾಗ ನಮಗೆ ಆಧ್ಯಾತ್ಮಿಕ ಸ್ವಾತಂತ್ರ್ಯ ಸಿಗುತ್ತದೆ. ಆದರೆ ನಕಾರಾತ್ಮಕ ಭಾಗಗಳಾದ ಕೋಪ, ಅಸೂಯೆ, ಕೀಳುತನ, ಅಸತ್ಯ ಮುಂತಾದವುಗಳನ್ನು ಹೊರತಂದಾಗ ಸಹಜವಾಗಿಯೇ ನಾವು ಆಧ್ಯಾತ್ಮಿಕವಾಗಿ ಕುಸಿಯುತ್ತೇವೆ, ನಾವು ಎಲ್ಲೇ ಹುಟ್ಟಿದರೂ ಬಹಳ ಸಮಯವನ್ನು ಆಧ್ಯಾತ್ಮಿಕ ಅಂಧಕಾರದಲ್ಲಿ ಕಳೆಯಬೇಕಾಗುತ್ತದೆ.

ದೈವೀ ವ್ಯವಸ್ಥೆಗಳು ನಮ್ಮ ಎಲ್ಲ ಭಾವನೆಗಳು, ಆಲೋಚನೆಗಳು ಮತ್ತು ಕಾರ್ಯಗಳನ್ನು ಗಮನಿಸುತ್ತವೆ, ನಿಗಾವಹಿಸುತ್ತವೆ ಹಾಗೂ ತುಲನೆ ಮಾಡಿ ವರ್ಗೀಕರಿಸುತ್ತವೆ ಎನ್ನುವುದನ್ನು ನಾವು ಮನಗಾಣಬೇಕು. ನಮ್ಮ ಸಾವಿನ ನಂತರ, ಮುಂದಿನ ಜನ್ಮದವರೆಗೆ ವಿಶ್ರಾಂತಿ ಪಡೆಯುವ ಸ್ಥಳ ಅಥವಾ ಜಗತ್ತಿಗೆ ನಾವು ಹೋದಾಗ ಅಲ್ಲಿ ಇವೆಲ್ಲವನ್ನೂ ನಮಗೆ ತೋರಿಸುತ್ತಾರೆ ಅಥವ ಇವುಗಳ ಬಗ್ಗೆ ಮಾಹಿತಿ ಕೊಡುತ್ತಾರೆ. ಇಂಥ ವಿಷಯಗಳ ಬಗ್ಗೆ ನಾವು ಗಾಬರಿಗೊಳ್ಳಬೇಕಾಗಿಲ್ಲ. ಆದರೆ ನಮ್ಮ ಭಾವನೆಗಳು, ಆಲೋಚನೆಗಳು ಮತ್ತು ಕಾರ್ಯಗಳ ಬಗ್ಗೆ ಹೆಚ್ಚು ಎಚ್ಚರಿಕೆಯಿಂದಿರಬೇಕು ಅಷ್ಟೆ. ನಾವು ಏನನ್ನಾದರೂ ಮಾಡುವ ಮುಂಚೆ ಸ್ವಲ್ಪ ಎಚ್ಚರಿಕೆಯಿಂದಿದ್ದರೆ, ಅಂತರ್ ಗ್ರಹಣಶಕ್ತಿಯನ್ನು ಬಳಸಿಕೊಂಡರೆ ನಾವು ಸರಿಯಾದುದನ್ನು ಆರಿಸಿಕೊಳ್ಳುತ್ತೇವೆ. ಶಂಬಲ ನಿಯಮಗಳನ್ನು ಅಭ್ಯಾಸಮಾಡಿ. ಧ್ಯಾನ ಸಹಾಯಮಾಡುತ್ತದೆ, ಮುನ್ನಡೆಸುತ್ತದೆ ಆದರೆ ಶಂಬಲ ನಿಯಮಗಳು ನಕಾರಾತ್ಮಕತೆಯನ್ನು ಸಂಪೂರ್ಣವಾಗಿ ತೊಡೆದುಹಾಕುತ್ತವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪೂರ್ಣವಾದ ಇಚ್ಛಾ ಪಟ್ಟಿ

**ಅಪೂರ್ವ ದೇಶ್‌ಪಾಂಡೆ; ಅನು: ಸುಧಾಕರ್**

ಅಧ್ಯಾಪಕರು ತರಗತಿಯ ಸಮಯವನ್ನು ಮೀರಿ ಮುಂದುವರೆಸಿದಾಗ ನನ್ನಲ್ಲಿ ಚಡಪಡಿಕೆಯುಂಟಾಗಿ ಅಶಾಂತಗೊಳ್ಳುತ್ತೇನೆ. ವಾರ ಪ್ರಾರಂಭವಾದಾಗಲೇ ವಾರಾಂತ್ಯವನ್ನು ಎದುರುನೋಡುತ್ತಿರುತ್ತೇನೆ. ರಜಾ ದಿನಗಳೇ ನನ್ನ ಜೀವಾಳವಾಗಿದೆ!

ರಜಾ ದಿನಗಳೇ ಇಲ್ಲದ ಕೆಲಸ ಹೇಗಿರಬಹುದೆಂದು ಯೋಚಿಸಿದ್ದೀರ? ಪ್ರತಿ ಶುಕ್ರವಾರದ ಮತ್ತು ನಿವಾಸಿಗಳ ಕೂಟದ ದಿನಗಳಂದು ಪರೀಕ್ಷೆಯ ರೀತಿಯ ಪ್ರಶ್ನೆಗಳನ್ನು, ಅದರಲ್ಲೂ 'ಪರೀಕ್ಷೆ'ಯ ಪಠ್ಯಭಾಗವೇ ತಿಳಿದಿರದಿದ್ದಾಗ, ಹೇಗೆ ಎದುರಿಸಬಹುದು ಎಂದು ಯೋಚಿಸಿದ್ದೀರ? ಕಳೆದ 25 ವರ್ಷಗಳಿಂದಲೂ ಪ್ರತಿ ಭಾನುವಾರದ ತರಗತಿಗಳಿಗೆ ಸಿದ್ಧತೆ ಮಾಡಿಕೊಂಡು ಹೊಸ ವಿಷಯಗಳೊಂದಿಗೆ ಒಂದೇ ಸಮನೆ ಜನರಿಗೆ ಜ್ಞಾನಾರ್ಜನೆ ಮಾಡುವುದು ಎಷ್ಟು ಸುಲಭವಿರಬಹುದು? ನಿಮ್ಮ ಪ್ರತಿಯೊಂದು ನಡೆಯನ್ನೂ ತಪ್ಪದೇ ಗಮನಿಸುತ್ತಿರುವಾಗ ಸಹಜತೆಯಿಂದ ನಡೆದುಕೊಳ್ಳುವುದು ಎಷ್ಟು ಸುಲಭವಿರಬಹುದು? ಗುರೂಜಿಯವರನ್ನು ಒಂದು ಪದದಲ್ಲಿ ವರ್ಣಿಸಿ ಎಂದು ಯಾರಾದರೂ ನನ್ನನ್ನು ಕೇಳಿದರೆ ನಾನು ಹೇಳುವುದು "ನಿಸ್ವಾರ್ಥಿ" ಎಂದು.

ಮಾನಸ ಫೌಂಡೇಶನ್ ಆರಂಭವಾದಾಗಿನಿಂದಲೂ ನಿಮ್ಮ ಮತ್ತು ನನ್ನಂಥವರಿಗೆ ಸಹಾಯ ಮಾಡುವುದಕ್ಕೆ ಗುರೂಜಿಯವರು ಅವಿಶ್ರಾಂತವಾಗಿ ಕೆಲಸಮಾಡಿದ್ದಾರೆ. ಈ ಸುಂದರ ಸಂಸ್ಥೆಯನ್ನು ತಮ್ಮ ಬೆವರು ಮತ್ತು ರಕ್ತದಿಂದ ಅಕ್ಷರಶಃ ಇಟ್ಟಿಗೆ ಇಟ್ಟಿಗೆಯಾಗಿ ಅವರು ಕಟ್ಟಿದ್ದಾರೆ. ಬಿರುಗಾಳಿ ಬೀಸಿದ ಪ್ರತಿಬಾರಿಯೂ ನಮ್ಮನ್ನು ಸುರಕ್ಷತೆಯೆಡೆಗೆ ಮೃದುವಾಗಿ ಮಾರ್ಗದರ್ಶಿಸಿದ್ದಾರೆ. ಕೆಲವೊಮ್ಮೆ ನೂರಾರು ವರ್ಷಗಳ ತಪಸ್ಸುಗಳು, ಯಜ್ಞಗಳು ಮತ್ತು ಪೂಜೆಗಳನ್ನು ಅಧ್ಯಾತ್ಮ ಎನ್ನುತ್ತಾರೆ. ಅದು ಸಾಮಾನ್ಯ ಜನರಿಗೆ ಸಾಧ್ಯವಿಲ್ಲವೆಂದೆನಿಸುತ್ತದೆ. ಆದರೆ 'ಆಧ್ಯಾತ್ಮಿಕತೆ'ಗೆ ಗುರೂಜಿಯವರು ಕೊಡುವ ಅತಿ ಸರಳವಾದ ಅರ್ಥ – 'ಒಳ್ಳೆಯವರಾಗಿರುವುದು'. ಇದಕ್ಕಿಂತ ಸರಳವಾದ, ಪೂರ್ಣವಾದ ಮತ್ತು ತರ್ಕಬದ್ಧವಾದ ವಿವರಣೆಯನ್ನು ನಾನು ಹಿಂದೆಂದೂ ಓದಿಲ್ಲ ಅಥವಾ ಕೇಳಿಲ್ಲ. ನನ್ನ ಹತ್ತಿರ ಇಚ್ಛೆಗಳ ಪಟ್ಟಿ ಮೊದಲಿನಿಂದಲೂ ಇತ್ತು. ಆದರೆ ನನ್ನ ಕನಸು ಮನಸಿನಲ್ಲೂ ದೇವರನ್ನು ತನ್ನ ಸಾಕಾರ ರೂಪದಲ್ಲಿ ಭೇಟಿಯಾಗುತ್ತೇನೆಂದು ಎಂದೆಂದಿಗೂ ಯೋಚಿಸಿರಲಿಲ್ಲ. ನಡೆದಾಡುವ ದೇವರ ಮಧ್ಯದಲ್ಲಿದ್ದುದಕ್ಕೆ ನಾವೆಲ್ಲರೂ ಅತ್ಯಂತ ಪುಣ್ಯಶಾಲಿಗಳು ಎಂದು ನಾನು ಭಾವಿಸುತ್ತೇನೆ. ಜೀವನದ ತೀವ್ರ ಹೊಡೆತಗಳೂ ಕೂಡ ಗುರೂಜಿಯವರ ಕೃಪೆಯಿಂದಾಗಿ ಅವುಗಳ ತೀಕ್ಷ್ಣತೆಯನ್ನು ಕಳೆದುಕೊಳ್ಳುತ್ತಿದ್ದವು. ಜೀವನವನ್ನು ಎದುರು ನೋಡಲು ಅವರು ಕಾರಣಗಳನ್ನು ಕೊಟ್ಟರು, ಜೀವನದಲ್ಲಿ ಉದ್ದೇಶವನ್ನು ಕೊಟ್ಟರು. ಜೀವನ ತಳವಿಲ್ಲದ ಗುಂಡಿಯಂತೆ ಇನ್ನೆಂದಿಗೂ ಕಾಣಿಸುತ್ತಿಲ್ಲ; ಆಶಾಭಾವವಿದೆ, ಸೂರ್ಯೋದಯವಿದೆ. ■

## ಬೆಳಕಿನ ಮಾರ್ಗದರ್ಶಿ

**ಅಭಿನಂದನ್ ಕುಂಜಳಿ ವಾಸನ್; ಅನು: ವರ್ಷಾ ದೀಪಕ್**

ಈ ಲೇಖನವನ್ನು ಬರೆಯಲಾರಂಭಿಸಿದಾಗ, ಗುರೂಜಿಯವರನ್ನು ನಾನೆಷ್ಟು ಸಮರ್ಪಕವಾಗಿ ವರ್ಣಿಸಬಲ್ಲೆ ಎಂದು ಯೋಚಿಸಿದೆ – ಒಬ್ಬ ತಂದೆ, ತಾಯಿ, ಅಂಕಲ್, ಸ್ನೇಹಿತ, ಮಾರ್ಗದರ್ಶಿ, ಆಪ್ತ ಸಲಹಾಕಾರ, ಗುರು ಅಥವಾ ಆದರ್ಶಪ್ರಾಯ ವ್ಯಕ್ತಿಯಾಗಿಯೇ? ಇವೆಲ್ಲವೂ ಮತ್ತು ಇನ್ನೂ ಹೆಚ್ಚು! ಗುರೂಜಿಯವರು, ಅನೇಕ ವಿಭಿನ್ನ ವ್ಯಕ್ತಿಗಳು ಸಮ್ಮಿಳನಗೊಂಡಿರುವ ಒಂದು ಮನುಷ್ಯ ರೂಪವಾಗಿದ್ದರು. ಭೌತಿಕ ಮತ್ತು ಆಧ್ಯಾತ್ಮಿಕ ಪ್ರಪಂಚದ ಜೀವನದಲ್ಲಿ ಸಮತೋಲನದಿಂದ, ಓರ್ವ ಗುರುವಾಗಿ ಮತ್ತು ಓರ್ವ ಶಿಷ್ಯನಾಗಿ, ಒಬ್ಬ ತಂದೆಯಾಗಿ ಮತ್ತು ಒಬ್ಬ ಸ್ನೇಹಿತನಾಗಿ ಸಮರ್ಪಕವಾಗಿ ಜೀವಿಸಿರುವ ಗುರೂಜಿಯವರು ಅನುಕರಣೀಯ ವ್ಯಕ್ತಿಯಾಗಿದ್ದರು.

ನಾವು ಗುರೂಜಿಯವರೊಂದಿಗೆ ಕಳೆಯಲು ಸಾಧ್ಯವಾದ ಆ ಎಲ್ಲಾ ವರ್ಷಗಳಲ್ಲಿ ಒಂದು ಬಾರಿಯೂ ನಮ್ಮ ನಡುವಿನ ವಯಸ್ಸಿನ ಅಂತರ ವರ್ಷಗಳಲ್ಲಿ ಭಾಸವಾಗುತ್ತಿರಲಿಲ್ಲ. ಅದು ಯಾವಾಗಲೂ ನಿಮಿಷಗಳ ಅಂತರವೇನೋ ಎಂದು ಅನಿಸುತ್ತಿತ್ತು. ನಾವು ಕೇಳುತ್ತಿದ್ದ ಪ್ರಶ್ನೆಗಳು ಲೌಕಿಕ ಪ್ರಪಂಚಕ್ಕೆ ಅಥವ ಅಲೌಕಿಕ ಪ್ರಪಂಚಕ್ಕೆ ಸಂಬಂಧಿಸಿದ್ದಾಗಿರಲಿ, ನಮಗಾಗಿ ಅವರಲ್ಲಿ ಸದಾ ಉತ್ತರವಿರುತ್ತಿತ್ತು.

ನಮ್ಮಲ್ಲಿ ಹೆಚ್ಚಿನವರು "Footprints in the Sand" ಎಂಬ ಪುಸ್ತಕವನ್ನು ಓದಿರಬಹುದು. ಅದರಲ್ಲಿ, ಕಷ್ಟಕಾಲದಲ್ಲಿ ಆ ವ್ಯಕ್ತಿಯನ್ನು ತಾನು ಹೊತ್ತುಕೊಂಡಿದ್ದೆ ಎಂದು ದೇವರು ಹೇಳುತ್ತಾನೆ. ನಮ್ಮ ಜೀವನದ ಕಷ್ಟಕಾಲದಲ್ಲಿ ಗುರೂಜಿಯವರು ನಮ್ಮನ್ನು ಹೊತ್ತುಕೊಂಡಿರುವುದನ್ನು ನಾವು ಇಲ್ಲಿ ಅನುಭವಿಸಿದ್ದೇವೆ. ನಮ್ಮ ಅಸಹಾಯಕ ಪರಿಸ್ಥಿತಿಗಳಲ್ಲಿ ಅವರು ಯಾವಾಗಲೂ ಒಂದು ಭರವಸೆಯ ಸಂಕೇತವಾಗಿದ್ದರು. ಕತ್ತಲಲ್ಲಿ ಹಾಗೂ ಬಿರುಗಾಳಿಯ ಸಮುದ್ರದಲ್ಲಿ ನಮಗೆ ಮಾರ್ಗದರ್ಶಿಸುವ ದಾರಿದೀಪವಾಗಿದ್ದರು. ನಾವು ದಾರಿತಪ್ಪಿದಾಗ ನಮಗಾಗಿ ಅವರಲ್ಲಿ ಉತ್ತರವಿರುತ್ತಿತ್ತು. ಅವರಿಗೆ ನಮ್ಮ ಮೇಲೆ ನಮಗಿಂತಲೂ ಹೆಚ್ಚು ಭರವಸೆಯಿತ್ತು.

ನಾನು ಅವರ ಬಗ್ಗೆ ಯೋಚಿಸಿದ ಪ್ರತಿಬಾರಿಯೂ ನನ್ನ ಎದೆಯಲ್ಲಿ ಒಂದು ರೀತಿಯ ನೋವಿನ ಅನುಭವವಾಗುತ್ತದೆ. ನಾನು ಅವರೊಂದಿಗೆ ನಡೆಸಿದ ಸಂಭಾಷಣೆಗಳೆಲ್ಲಾ ನೆನಪಾಗುತ್ತದೆ. ಆಗ, ಯಾವರೀತಿ ಲೈಟ್‌ಹೌಸ್ ದೂರ ಸಮುದ್ರದಲ್ಲಿ ಹಡಗುಗಳಿಲ್ಲದಿದ್ದರೂ ತನ್ನ ಕೆಲಸವನ್ನು ನಿಲ್ಲಿಸುವುದಿಲ್ಲವೋ, ಅದೇ ರೀತಿ ಗುರೂಜಿಯವರು ನಮಗೆ ಮಾರ್ಗದರ್ಶನ ನೀಡುವುದಕ್ಕಾಗಿ ಇನ್ನೂ ಇಲ್ಲಿ ಇದ್ದಾರೆ ಎಂಬುದು ನನಗೆ ನೆನಪಾಗುತ್ತದೆ. ಅವರ ನಿರೀಕ್ಷೆಯ ಮಟ್ಟಕ್ಕೆ ಏರುವುದಷ್ಟೇ ನಾವು ಮಾಡಬೇಕಾದ ಕೆಲಸ. ಅವರು ನಮ್ಮ ಪ್ರಶ್ನೆಗಳಿಗೆ ಇನ್ನೂ ಉತ್ತರಿಸುತ್ತಿದ್ದಾರೆ. ಅದನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲು ನಾವು ನಮ್ಮನ್ನು ಬದಲಾಯಿಸಿಕೊಳ್ಳಬೇಕು. ಗುರೂಜಿಯವರು ನಮ್ಮ ಬಗ್ಗೆ ಇಟ್ಟಿರುವ ನಿರೀಕ್ಷೆಯನ್ನು ತಲುಪುವುದು ಮತ್ತು ಅದನ್ನೂ ಮೀರಿಹೋಗುವುದೇ ನಾವು ಅವರಿಗೆ ನೀಡಬಹುದಾದಂಥ ಶ್ರೇಷ್ಠ ಗುರುದಕ್ಷಿಣೆಯಾಗಿದೆ. ■

## ಗುರೂಜಿ

**ವೈಶಾಲಿ ಜೋಷಿ; ಅನು: ಪಾಂಡುರಂಗ**

ಗುರೂಜಿಯವರ ಧ್ಯಾನ ಕಲಿಯಬೇಕೆಂಬಾಸೆ, ಅವರನ್ನು ಅಮರರವರ ಹತ್ತಿರ ಕರೆದುಕೊಂಡು ಹೋಯಿತು. ಅಮರರವರ ಒಡನಾಡಿಯಾಗಿ ಋಷಿ ಮಾರ್ಗದಲ್ಲಿ ಪ್ರಯಾಣಿಸುತ್ತಾ, ಋಷಿಗಳ ಕೇಂದ್ರದ ಸ್ಥಾಪನೆಗೆ ಅಮರರವರು ನೀಡಿದ ಕರೆಗೆ ಸ್ಪಂದಿಸಿ ಆ ಕೆಲಸಕ್ಕೆ ಸೇರಿದರು. ಅವರು ಅನುಭವಿಸಿದ ಹೇಳಿಕೊಳ್ಳಲಾಗದ ಯಾತನೆ, ಕಷ್ಟ, ಅವಮಾನ, ಇವು ಯಾವುವೂ ಅವರ ಗುರಿಸಾಧನೆಗೆ ಅಡ್ಡಿಬರದಂತೆ ನೋಡಿಕೊಂಡರು. ಅವರು ಋಷಿಗಳ ಕೆಲಸದಿಂದ ಎಂದೆಂದಿಗೂ ಹಿಂತಿರುಗಿ ಹೋಗುವುದಿಲ್ಲವೆಂಬ ನಿರ್ಧಾರ ಮಾಡಿದರು ಹಾಗೂ ಯಾವುದೇ ಹಿಂಜರಿಕೆಯಿಲ್ಲದೆ ಸಂಕಷ್ಟಗಳನ್ನು ಎದುರಿಸಿದರು ಮತ್ತು ಅದರಿಂದ ಹೊರಬಂದು ಸೂರ್ಯನಂತೆ ಪ್ರಕಾಶಿಸುತ್ತಾ ಈ ಭೂಮಿಯ ಮೇಲೆ ಬೆಳಕನ್ನು ಹರಡಿದರು.

ಅವರು ಕೆಲಸವನ್ನು ಮೊದಲಿನಿಂದ ಪ್ರಾರಂಭಿಸಿದರು ಹಾಗೂ ಅದನ್ನು ಕ್ರಮಬದ್ಧವಾಗಿ ಮತ್ತು ನಿಖರತೆಯಿಂದ ಮಾಡುತ್ತಾ ಹೋದರು. ಅವರ ಪ್ರಯತ್ನಗಳ ಫಲವಾಗಿ ಮಾನಸ ಮತ್ತು ಅಂತರ ಮಾನಸದಲ್ಲಿ ನಿರ್ಮಿಸಿರುವ ಅನೇಕ ಕಟ್ಟಡಗಳು ಚೈತನ್ಯ ಶಕ್ತಿಗಳ ಭಂಡಾರಗಳೆನಿಸಿವೆ.

ಗುರೂಜಿಯವರು ಈ ಭೂಮಿಯ ಜನರ ಪರವಾಗಿ ಚೈತನ್ಯಗಳನ್ನು ಸ್ವೀಕರಿಸಿ ಅದು ಇಡೀ ಭೂಮಿಗೆ ಹರಡಲು ಅನುವಾಗುವಂತೆ ಒಂದು ಕಡೆ ಸ್ಥಾಪಿಸುತ್ತಿದ್ದುದು ಸಾಕ್ಷಾತ್ ಶಿವ ಗಂಗಾನದಿಯನ್ನು ಸ್ವೀಕರಿಸಿ ಈ ಭೂಮಿಯನ್ನು ಶುದ್ಧಗೊಳಿಸಲು ಹರಿಯಬಿಟ್ಟಂತೆ ಇರುತ್ತಿತ್ತು. ಅದರಿಂದುಂಟಾದ ನಕಾರತ್ಮ ಪ್ರಭಾವಗಳನ್ನು ಗುರೂಜಿಯವರು ಅರಗಿಸಿಕೊಳ್ಳುತ್ತಿದ್ದುದು ಸಮುದ್ರ ಮಂಥನದಿಂದ ಉಂಟಾದ ವಿಷವನ್ನು ಮನುಕುಲಕ್ಕೆ ಹಾನಿಯಾಗದಿರಲೆಂದು ಶಿವನು ಸೇವಿಸಿದಂತಿರುತ್ತಿತ್ತು,

ಅವರು ಏಕಾಂಗಿಯಾಗಿಯೇ ಇರಬೇಕಾಯಿತು. ಕಾರಣ ನಾವುಗಳು ನಮ್ಮ ಅಹಂನಲ್ಲಿ ಮುಳುಗಿಹೋಗಿದ್ದೆವು. ನಮ್ಮ ನಕಾರಾತ್ಮಕತೆಗಳು ಅವರಲ್ಲಿ ನೋವನ್ನುಂಟುಮಾಡುತ್ತಿದ್ದವು ಏಕೆಂದರೆ ಗುರೂಜಿಯೇ ಇವೆಲ್ಲವುಗಳನ್ನು ತೆಗೆದುಕೊಳ್ಳುವಂತೆ ಮಾಡಿದ್ದು, ಅವರ ದುಃಖಕ್ಕೆ ಕಾರಣವಾಗಿತ್ತು. ಹೀಗಿದ್ದರೂ, ಗುರೂಜಿ ನಮ್ಮನ್ನು ಯಾವ ರೀತಿಯಲ್ಲೂ ವಿಶ್ಲೇಷಿಸದೆ, ತಮ್ಮ ಸ್ವಾರ್ಥರಹಿತ ಪ್ರೀತಿಯನ್ನೇ ಹರಿಸಿದರು. ನಮ್ಮ ಸಹಜ ದೌರ್ಬಲ್ಯಗಳನ್ನು ಮೀರಿ ಬೆಳೆಯಬೇಕೆಂದು, ಅವರು ಸದಾಕಾಲ ನಮಗೆ ಸಹಾಯ ಮಾಡುತ್ತಿದ್ದರು. ಇದರಿಂದ ನಮ್ಮ ಮೂಲಸ್ಥಾನಕ್ಕೆ ನಮ್ಮನ್ನು ತಲುಪಿಸುವುದು ಅವರ ಉದ್ದೇಶವಾಗಿತ್ತು. ಅವರು ಬೆಳಕಾಗಿದ್ದರು, ಈಗಲೂ ಅವರು ನಮಗೆ ದಾರಿದೀಪವಾಗಿ ಮುನ್ನೆಡೆಸುತ್ತಿದ್ದಾರೆ. ■

## ಗುರೂಜಿ, ಜೀವನದ ಪುಸ್ತಕ

**ಜಯಾ ಬಿ.; ಅನು: ಪಾಂಡುರಂಗ**

ನಮ್ಮ ನಡುವೆ ಇದ್ದ ಗುರೂಜಿಯವರ ಅಗಲಿಕೆಯ ನೋವು ಬೇಗ ಕಳೆಯಲೆಂದೇನೋ ಒಂದು ವರ್ಷ ಕಣ್ಣುಮಿಟುಕಿಸುವುದರೊಳಗೆ ಜಾರಿಹೋಯಿತು.

ಸಮತೋಲನದ ಜೀವನಕ್ಕೆ ಗುರೂಜಿಯವರ ಜೀವನವೇ ಒಂದು ಪರಿಪೂರ್ಣ ಮಾರ್ಗದರ್ಶಿ ಮತ್ತು ಇದನ್ನೇ ಅವರು ಪ್ರತಿ ಸಂದರ್ಭದಲ್ಲೂ ಮುಖ್ಯವೆಂದು ಸಾರಿಸಾರಿ ಹೇಳುತ್ತಿದ್ದರು. ಅವರಿಗೆ ಸಮರ್ಪಕ ಜೀವನವೆಂದರೆ, ಜೀವನದ ಆಧ್ಯಾತ್ಮಿಕ ಮತ್ತು ಲೌಕಿಕ ಅಂಶವೆರಡನ್ನೂ ಸರಿದೂಗಿಸುವುದಾಗಿತ್ತು. ಯಾರೊಬ್ಬರೂ ದೇವರನ್ನು ಹುಡುಕಿಕೊಂಡು ಹಿಮಾಲಯಕ್ಕೆ ಪಲಾಯನ ಮಾಡಬೇಕಾಗಿಲ್ಲ. ಅದೊಂದು ಕಲ್ಪನೆಯಲ್ಲ ಮತ್ತು ಅಲ್ಲಿಯೂ ಕೂಡಾ ಕಂದಕಗಳಿವೆ. ನಾವು ಆಧ್ಯಾತ್ಮಿಕ ಹುಡುಕಾಟವನ್ನು ಹೇಗೇ ಪ್ರಾರಂಭಿಸಿದರೂ, ಅಡಚಣೆಗಳು ಮತ್ತು ಪರೀಕ್ಷೆಗಳು ಈ ಪ್ರಯಾಣದಲ್ಲಿ ಹಾಸುಹೊಕ್ಕಾಗಿರುತ್ತವೆ.

ಗುರೂಜಿಯವರು ಪ್ರತಿಬಾರಿಯೂ ಆಧ್ಯಾತ್ಮಿಕ ಮಾಸ್ಟರ್‌ರಾಗಿಯೇ ಜನ್ಮವೆತ್ತಿದರೂ, ಈ ಐಹಿಕ ಜೀವನದ ಏರಿಳಿತಗಳು ಅವರನ್ನು ಬಿಡಲಿಲ್ಲ. ಆದರೂ ತಮ್ಮ ಗುರುಗಳಾದ ಅಮರರಲ್ಲಿ, ಋಷಿಗಳಲ್ಲಿ ಅವರಿಗಿದ್ದ ಸಂಪೂರ್ಣ ನಂಬಿಕೆ ಮತ್ತು ಶರಣಾಗತಿಯಿಂದಾಗಿ ಅವರು ಬಡತನದಲ್ಲಿಯೂ ಕೂಡಾ ರಾಜನಂತೆ ಬಾಳಿದರು ಹಾಗೂ ತಮ್ಮ ಜೀವನದುದ್ದಕ್ಕೂ ನಷ್ಟ, ಯಾತನೆ, ಅಪಮಾನ, ನಂಬಿಕೆದ್ರೋಹ, ತಿರಸ್ಕಾರ ಮತ್ತು ದೋಷಾರೋಪಣೆಗಳನ್ನು ಕೂಡಾ ನಗುನಗುತ್ತಾ ಧೈರ್ಯದಿಂದ ಎದುರಿಸಿದರು.

ಒಬ್ಬ ಹೊಸಯುಗದ ಮಾಸ್ಟರ್ ಆಗಿ, ಈ ಪ್ರಳಯಕಾಲದಲ್ಲಿ ಮನುಕುಲವನ್ನು ಮಾರ್ಗದರ್ಶಿಸಲು ಋಷಿಗಳಿಂದ ಆಯ್ಕೆಗೊಂಡಿದ್ದ ಅವರ ಕೆಲಸ ಸುಲಭದ್ದಾಗಿರಲಿಲ್ಲ. ಐದು ಸಾವಿರ ವರ್ಷಗಳವರೆಗೆ ಅಂಧಕಾರದ ಹಿಡಿತದಲ್ಲಿದ್ದ ಮನುಕುಲವನ್ನು ಅದರಿಂದ ಪಾರುಮಾಡುವುದು ಅತ್ಯಂತ ಪರಿಶ್ರಮದ ಕೆಲಸವಾಗಿತ್ತು. ಆದರೂ ಋಷಿಗಳ ದೈವೀ ಯೋಜನೆಯೆಡೆಗಿನ ಅವರ ಬದ್ಧತೆ ಅಸಾಧ್ಯವಾದುದನ್ನು ಸಾಧಿಸಲು ಸಹಕರಿಸಿತು. ಶಾಂತತೆ ಮತ್ತು ನಿಶ್ಚಲತೆಯಲ್ಲಿ ಈ ಕೇಂದ್ರ ಬೆಳೆದ ಗತಿ ನಿಜವಾಗಿಯೂ ಗಮನಾರ್ಹವಾಗಿದೆ.


ಅವರು ಪ್ರಸ್ತುತ ಕಾಲದ ಒಬ್ಬ ಮಹಾನ್ ಮಾಸ್ಟರ್ ಆಗಿದ್ದರೂ ಕೂಡಾ ಪ್ರಕೃತಿ ಹಾಗೂ ಮನುಷ್ಯರೊಂದಿಗೆ ವಿನಯ, ಸರಳತೆ ಮತ್ತು ಏಕತೆಯ ವಿಷಯದಲ್ಲಿ ನಮ್ಮಲ್ಲಿ ಒಬ್ಬರಂತಿರುತ್ತಿದ್ದರು.

ಯಾರಾದರೂ ಅವರೊಂದಿಗೆ ಮತ್ತು ಈ ಸ್ಥಳದೊಂದಿಗೆ ಶ್ರುತಿಗೊಳ್ಳಲು ಪ್ರಯತ್ನಿಸಿದರೆ, ಈಗಲೂ ಕೂಡ ಗುರೂಜಿಯವರ ಇರುವಿಕೆ ಮತ್ತು ಅವರ ಮಾರ್ಗದರ್ಶನವನ್ನು ಅನುಭವಿಸದೇ ಇರಲು ಸಾಧ್ಯವಿಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 &4 | each 200/- |
| Guruji Speaks Part - I & II | each 200/- |
| Guruji Speaks (Vol - 3) | 150/- |
| Guruji Speaks (Vol 4, 5, 6 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ನಮ್ಮ 'ಬೆಳಕಿನಿಂದ ಕ್ರಾಂತಿ' ಬ್ಲಾಗ್ ಬಗ್ಗೆ 'ವರ್ಡ್‌ಪ್ರೆಸ್ ಡಾಟ್ ಕಾಂ'ನಲ್ಲಿ ಬಂದ ವಿಮರ್ಶೆಗಳು

ಸಂ: ಗುರುರಾಜ್ ಕಾನಡೆ; ಅನು: ಸ್ವರ್ಣಲತಾ

ಸೃಷ್ಟಿಕರ್ತನ ಅನಂತ ಬೆಳಕು ಎಲ್ಲವನ್ನೂ ವ್ಯಾಪಿಸಿದೆ. ಎಲ್ಲಾ ವಿಶ್ವಗಳ, ಎಲ್ಲಾ ಆಯಾಮಗಳ ಮತ್ತು ಎಲ್ಲಾ ಪ್ರಪಂಚಗಳ, ಗೋಚರ ಮತ್ತು ಅಗೋಚರ, ಜ್ಞಾತ ಮತ್ತು ಅಜ್ಞಾತಗಳಲ್ಲಿನ ಪ್ರತಿ ಪ್ರಜ್ಞೆಗಳಿಗೂ ಬೆಳಕು ಹರಡಿದೆ. ಸೃಷ್ಟಿಕರ್ತನೇ ಬೆಳಕಿನ ಮೂಲವಾಗಿದ್ದಾನೆ. ನಾವು ದಯೆ ಮತ್ತು ಕರುಣೆಯನ್ನು ತೋರಿದಾಗ ಸೃಷ್ಟಿಕರ್ತನ ಬೆಳಕನ್ನು ಹರಡುತ್ತೇವೆ. ನಾವು ಶಾಂತಿಗಾಗಿ ಕೆಲಸ ಮಾಡಿದರೆ, ಇಡೀ ಮಾನವ ಕುಲಕ್ಕೇ ಕೆಲಸ ಮಾಡಿದಂತೆ.

– ಜೊನಾಥನ್ ಜಾಕೋಬ್ ಬರ್ಗ್‌ಮನ್, 'ಬೆಳಕಿನ ಕ್ರಾಂತಿ ಇಡೀ ಪ್ರಪಂಚಕ್ಕೆ ಹರಡುತ್ತದೆಯೇ?' ಎಂಬ ನಮ್ಮ ಪೋಸ್ಟ್ ಬಗ್ಗೆ

ಜನರೆಲ್ಲಾ ಒಟ್ಟಾಗಿ ಸೇರಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದನ್ನು ನಾನು ಇಷ್ಟಪಡುತ್ತೇನೆ. ಇದೊಂದು ಉತ್ತಮವಾದ ಬ್ಲಾಗ್, ಈ ಒಳ್ಳೆಯ ಕೆಲಸ ಮಾಡುವುದನ್ನು ಮುಂದುವರಿಸಿ!

– ನಮ್ಮ ಬ್ಲಾಗ್‌ನ ಒಬ್ಬ ಸಂದರ್ಶಕ – 'ಸ್ಥಿರತೆಯ ಪ್ರಾಮುಖ್ಯತೆ' ಎಂಬ ಪೋಸ್ಟ್ ಬಗ್ಗೆ

ನಿಮ್ಮ ಲೇಖನ ವಿಸ್ಮಯಕರವಾಗಿದೆ ಎಂದಷ್ಟೇ ಹೇಳಬಲ್ಲೆ. ನಿಮ್ಮ ಪ್ರಕಟಣೆಯ ಸ್ಪಷ್ಟತೆ ತುಂಬಾ ಸುಂದರವಾಗಿದೆ. ನೀವು ಇದರಲ್ಲಿ ಅತ್ಯಂತ ಪ್ರವೀಣರೆನಿಸುತ್ತದೆ. ನಿಮಗೆ ಸಹಸ್ರ ಬಾರಿ ಧನ್ಯವಾದಗಳು. ದಯವಿಟ್ಟು ಈ ಸಂತೋಷದಾಯಕ ಕೆಲಸವನ್ನು ಮುಂದುವರೆಸಿ.

– ನಮ್ಮ ಬ್ಲಾಗ್‌ನ ಓರ್ವ ಸಂದರ್ಶಕ, 'ಗ್ರಹಣಗಳು ಮತ್ತು ಧ್ಯಾನ' ಎಂಬ ನಮ್ಮ ಪೋಸ್ಟ್ ಬಗ್ಗೆ (2013ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮೂರು ಗ್ರಹಣಗಳು)

ನಿಮ್ಮ ಬ್ಲಾಗ್‌ಗೆ 'ಡೊನೇಟ್' ಬಟನ್ ಇಲ್ಲದಿರುವುದು ವಿಷಾದದ ಸಂಗತಿ! ಈ ಅದ್ಭುತ ಬ್ಲಾಗ್‌ಗೆ ನಿಸ್ಸಂದೇಹವಾಗಿ ದೇಣಿಗೆ ನೀಡಬಹುದಾಗಿತ್ತು! ನಾನು ಹೊಸಹೊಸ ಅಪ್‌ಡೇಟ್‌ಗಳಿಗಾಗಿ ಎದುರು ನೋಡುತ್ತಿದ್ದೇನೆ.

– ಹೆಲಿನಾ, 'ಬೆಳಕನ್ನು ಅನುಭವಿಸುವುದು' ಎಂಬ ಪೋಸ್ಟ್ ಬಗ್ಗೆ

ಬೆಳಕನ್ನು ಅನುಭವಿಸದಿರುವವರು ಬೆಳಕಿನ ಸಾಮ್ರಾಜ್ಯಕ್ಕೆ ಹೋಗಲು ಅವಶ್ಯವಾದ ಕೆಲಸವನ್ನು ಮಾಡಲು ಇಷ್ಟಪಡುತ್ತಿಲ್ಲವೆಂದಷ್ಟೇ ನಾನು ಹೇಳಬಲ್ಲೆ. ನೆಟ್‌ನಲ್ಲಿ ಅನೇಕರು ಹಾಗೂ ಪ್ರಪಂಚದಾದ್ಯಂತ ಅನೇಕರು ಇದನ್ನು ಅರ್ಥಮಾಡಿಕೊಳ್ಳಲಾರರು, ಇನ್ನು ಅನೇಕರಿದ್ದಾರೆ ಅವರು ಹಣಕ್ಕಾಗಿ, ಪ್ರಸಿದ್ಧಿಗಾಗಿ, ಪ್ರೀತಿಗಾಗಿ ಹಾಗೂ ಕೆಲಸಕ್ಕಾಗಿ ಎಲ್ಲವನ್ನೂ ಮಾರುತ್ತಾರೆ. ಬೆಳಕಿನ ಈ ಮಾರ್ಗ ಕಷ್ಟಕರವಾಗಿದೆ. ಅದಕ್ಕೆ ಅಧ್ಯಯನ, ಜ್ಞಾನ ಮತ್ತು ಮೂಲತತ್ವ ಬೇಕಾಗುತ್ತದೆ. ಬಹಳ ಪರಿಶ್ರಮ ಹಾಗೂ ಕಠಿಣ ಅನುಭವಗಳ ನಂತರ ಒಂದು ಹಂತವನ್ನು ನೀವು ತಲುಪಿದಾಗ, ಏನೇ ಬಂದರೂ ನೀವು ಸತ್ಯದ ಹಾದಿಯಲ್ಲೇ ನಡೆಯಬಲ್ಲಿರಾ ಎನ್ನುವುದನ್ನು ಪರೀಕ್ಷಿಸಲು ಪದೇ ಪದೇ ಪರೀಕ್ಷೆಗಳಿರುತ್ತವೆ. ಅಲ್ಲದಿದ್ದರೆ, ನಿಮ್ಮನ್ನು ನೀವು ವಂಚಿಸಿಕೊಳ್ಳುತ್ತಿದ್ದೀರಿ.

– ವಿಲಿಯಂ ಡೇಸಿ –'ಬೆಳಕನ್ನು ಅನುಭವಿಸುವುದು' ಎಂಬ ನಮ್ಮ ಪೋಸ್ಟ್ ಬಗ್ಗೆ

ನಾವು ಗಳಿಸಿದ ವಿವೇಚನೆ ನಮ್ಮ ನೋವನ್ನು ಮರೆಯುವಂತೆ ಮಾಡುತ್ತದೆ! ಎಷ್ಟು ಸತ್ಯ!

– ಗೀತಾ ಸರಸ್ವತಿ, 'ವಿಶ್ವದ ವಿವೇಚನೆ' ಎಂಬ ನಮ್ಮ ಪೋಸ್ಟ್ ಬಗ್ಗೆ

ಈ ವಿಷಯದ ಬಗ್ಗೆ ತಿಳಿಯಲು ಇಚ್ಛಿಸುವವರಿಗೆ ಇದು ಒಂದು ಸರಿಯಾದ ವೆಬ್‌ಸೈಟ್. ನಿಮಗೆ ಎಷ್ಟೊಂದು ತಿಳಿದಿದೆಯೆಂದರೆ ನಿಮ್ಮೊಂದಿಗೆ ವಾದಿಸಲು ಅಸಾಧ್ಯ. ದಶಕಗಳಿಂದಲೂ ಚರ್ಚಿಸುತ್ತಿರುವ ಈ ವಿಷಯಕ್ಕೆ ನೀವು ನಿಜವಾಗಿಯೂ ಹೊಸ ತಿರುವನ್ನು ಕೊಟ್ಟಿದ್ದೀರಿ. ಇದೊಂದು ಉತ್ಕೃಷ್ಟವಾದ ಮತ್ತು ಬಹುದೊಡ್ಡ ಕೊಡುಗೆಯಾಗಿದೆ.

– ನಮ್ಮ ಬ್ಲಾಗ್‌ನ ಓರ್ವ ಸಂದರ್ಶಕ, 'ಜ್ಞಾನೋದಯ' ಎಂಬ ನಮ್ಮ ಪೋಸ್ಟ್ ಬಗ್ಗೆ

ಒಬ್ಬ ಹೀಲರ್ ಆಗಿ ನನ್ನ ಚಿಕಿತ್ಸಾಲಯಕ್ಕೆ ಬರುವ ಜನರಿಗೆಲ್ಲ ನಾನು ಚಿಕಿತ್ಸೆ ಮಾಡುತ್ತೇನೆ. ಹಾಗೂ ಅವರಿಗೆ ಈ ಬೆಳಕಿನ ಸಂಚಲನದ ಬಗ್ಗೆ ತಿಳಿಸಿ, ಅದನ್ನು ಪ್ರತಿ ದಿನ ಅಭ್ಯಾಸ ಮಾಡಲು ಹೇಳುತ್ತೇನೆ. ಭಗವಂತನನ್ನು ಸಂಪರ್ಕಿಸಲು ಇದು ಅತ್ಯಂತ ಪ್ರಬಲವಾದ ಹಾಗೂ ಸುಲಭವಾದ ಮಾರ್ಗ.

– ಗಣಪತಿ, 'ಲೈಟ್ ಮಾಸ್ಟರ್‌ಗಳ ಒಂದು ಸಂದೇಶ' ಎಂಬ ನಮ್ಮ ಪೋಸ್ಟ್ ಬಗ್ಗೆ

ಈಗ ನಾನು ಕೆಲವು ದಿನಗಳಿಂದ ಬೆಳಕಿನ ಧ್ಯಾನವನ್ನು ದಿನಕ್ಕೆರಡು ಬಾರಿ ಮಾಡುತ್ತಿದ್ದೇನೆ. ನನ್ನ ಹೊರನೋಟದಲ್ಲಿ, ವರ್ತನೆಯಲ್ಲಿ, ತಾಳ್ಮೆಯ ಮಟ್ಟದಲ್ಲಿ ಮತ್ತು ಅಂಗೀಕಾರದಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತಿದೆ. ನನ್ನಲ್ಲಾಗಿರುವ ಈ ಬದಲಾವಣೆಯನ್ನು ಬೇರೆಯವರೂ ಗುರುತಿಸಿದ್ದಾರೆ. ಹಿಂದಿಗಿಂತಲೂ ಈಗ ನಾನು ಅತ್ಯಂತ ಪ್ರಶಾಂತವಾಗಿದ್ದೇನೆ. ಆದರೂ ಇನ್ನೂ ಮಾಡಬೇಕಾದ್ದು ಬೇಕಾದಷ್ಟಿದೆ ಎಂದು ನನಗನಿಸುತ್ತಿದೆ. ನಿಮ್ಮ ಮಾರ್ಗದರ್ಶನಕ್ಕೆ, ವಿವೇಕಯುಕ್ತ ಪದಗಳಿಗೆ ಮತ್ತು ಪ್ರೀತಿಗೆ ಅನೇಕ ವಂದನೆಗಳು. ನಾನೊಬ್ಬ ಅದೃಷ್ಟವಂತ.

– ಮರಿಯನ್ ಕಾನರ್ಸ್, 'ಲೈಟ್ ಮಾಸ್ಟರ್‌ಗಳ ಒಂದು ಸಂದೇಶ' ಎಂಬ ನಮ್ಮ ಪೋಸ್ಟ್ ಬಗ್ಗೆ

ನಿಮ್ಮ ಲೇಖನವನ್ನು ಓದಿ ಸಂತೋಷ ಹಾಗೂ ಪ್ರೀತಿಯಿಂದ ನನ್ನ ಹೃದಯ ತುಂಬಿ ಬಂದಿತು. ವಂದನೆಗಳು.

– ಒಬ್ಬ ಸಂದರ್ಶಕರು, 'ಲೈಟ್ ಮಾಸ್ಟರ್‌ಗಳ ಒಂದು ಸಂದೇಶ' ಎಂಬ ನಮ್ಮ ಪೋಸ್ಟ್ ಬಗ್ಗೆ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ